
ಮತದಾರ ಸಾಕ್ಷರತಾ ಸಂಘ

ಭಾರತ ಚುನಾವಣಾ ಆಯೋಗ

# ಮತದಾರ ಸಾಕ್ಷರತಾ ಸಂಘ (ಇ.ಎಲ್.ಸಿ)

# ಕಾಲೇಜುಗಳಲ್ಲಿ ಸಂಪನ್ಮೂಲ ಮಾರ್ಗದರ್ಶಿ






ಭಾರತ ಚುನಾವಣಾ ಆಯೋಗದಿಂದ 2018 ರಲ್ಲಿ ಪ್ರಕಟಿಸಲ್ಪಟ್ಟಿದೆ.
ನಿರ್ವಾಚನ ಸದನ, ಅಶೋಕ ರಸ್ತೆ, ನವದೆಹಲಿ–110001

*ಮಾಹಿತಿ, ಚಿತ್ರಗಳು ಭಾರತ ಚುನಾವಣಾ ಆಯೋಗದ ಹಕ್ಕು ಸ್ವಾಮ್ಯದಲ್ಲಿವೆ.*



**ಸಂದೇಶ**

**ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳು ತಮಗೆ ಸೂಕ್ತವಾದ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಉತ್ತಮ ಸರ್ಕಾರವನ್ನು ರಚಿಸಲು ಸಾರ್ವತ್ರಿಕ ಚುನಾವಣೆಗಳು ಅನುವು ಮಾಡಿಕೊಡುತ್ತವೆ. ಈ ಮಹತ್ವಾಕಾಂಕ್ಷೆಯ ಹಿನ್ನಲೆಯಲ್ಲಿ ಭಾರತ ಚುನಾವಣಾ ಆಯೋಗವು **"ಯಾವೊಬ್ಬ ಮತದಾರನೂ ಹೊರಗುಳಿಯಬಾರದು"** ಮತ್ತು **"ಪ್ರತಿಯೊಂದು ಮತವೂ ಅತ್ಯಮೂಲ್ಯ"** ಎಂಬ ತಾತ್ವಿಕ ನೆಲಗಟ್ಟಿನಡಿ ಭವಿಷ್ಯದ ಮತದಾರರು, ನೂತನ ಮತದಾರರು ಮತ್ತು ನೋಂದಣಿರಹಿತ ಯುವ ಮತದಾರರನ್ನು ಗುರಿಯನ್ನಾಗಿಸಿಕೊಂಡು ಎಲ್ಲಾ ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆ, ಕಾಲೇಜು, ವಿಶ್ವವಿದ್ಯಾನಿಲಯಗಳು ಮತ್ತು ಮತಗಟ್ಟೆ ಕೇಂದ್ರಗಳಲ್ಲಿ **"ಮತದಾರ ಸಾಕ್ಷರತಾ ಸಂಘ"** (Electroal Literacy Clubs) ಮತ್ತು **"ಚುನಾವಣಾ ಜಾಗೃತಿ ಸಂಘ"** (Chunavana Jagruthi Clubs) ಗಳನ್ನು ಪ್ರಾರಂಭಿಸಿ, ವಿದ್ಯಾರ್ಥಿಗಳು ಮತ್ತು ಯುವ ಮತದಾರರಲ್ಲಿ ಚುನಾವಣೆ ಹಾಗೂ ಮತದಾನ ಪ್ರಕ್ರಿಯೆಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶಗಳನ್ನು ಹೊಂದಿರುತ್ತದೆ.

ಈ ಹಿನ್ನಲೆಯಲ್ಲಿ ಭಾರತ ಚುನಾವಣಾ ಆಯೋಗವು ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ನೀಡಿ, ಅಗತ್ಯ ಸಂಪನ್ಮೂಲ ಸಾಹಿತ್ಯವನ್ನು ಆಂಗ್ಲಭಾಷೆಯಲ್ಲಿ ಒದಗಿಸಿರುತ್ತದೆ. ಈ ಸಾಹಿತ್ಯವನ್ನು ಪರಿಣಿತರಿಂದ ಕನ್ನಡಕ್ಕೆ ಭಾಷಾಂತರ ಮಾಡಿಸಿ, ಇಎಲ್‌ಸಿ ಕೇಂದ್ರಗಳಿಗೆ ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಒದಗಿಸುವ ಸಲುವಾಗಿ ಎಲ್ಲಾ ಜಿಲ್ಲಾ ಹಂತಗಳಿಗೆ ಕಳುಹಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಪೂರಕವಾಗಿ ರಾಜ್ಯ, ವಿಭಾಗ, ಜಿಲ್ಲೆ, ಮತ್ತು ತಾಲ್ಲೂಕು ಹಂತದ ಸಂಪನ್ಮೂಲ ವ್ಯಕ್ತಿಗಳಿಗೆ ಕ್ಯಾಸ್ಕೆಡ್ ಮಾದರಿಯಲ್ಲಿ ತರಬೇತಿಯನ್ನು ನೀಡಲಾಗಿರುತ್ತದೆ. ಶಾಲಾ-ಕಾಲೇಜು ಮತ್ತು ಮತಗಟ್ಟೆ ಕೇಂದ್ರಗಳ (Booth Level) ಹಂತದಲ್ಲಿ ಆಯಾ ಇಎಲ್‌ಸಿ ಸಂಚಾಲಕರು ಹಾಗೂ ನೋಡಲ್ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲು ಕನ್ನಡಕ್ಕೆ ಭಾಷಾಂತರಿಸಲಾದ ಸಂಪನ್ಮೂಲ ಸಾಹಿತ್ಯವನ್ನು ಸಹಾ ಒದಗಿಸಲಾಗಿರುತ್ತದೆ.

ಈ ತರಬೇತಿ ಸಂಪನ್ಮೂಲ ಸಾಹಿತ್ಯವು IX, X, XI,XII ಕಾಲೇಜು ಮತ್ತು ಚುನಾವಣಾ ಜಾಗೃತಿ ಸಂಘಗಳಿಗೆ ಪ್ರತ್ಯೇಕವಾಗಿ ರಚಿಸಲಾಗಿದ್ದು, ಹಲವಾರು ಚಟುವಟಿಕೆಗಳು ಮತ್ತು ಆಟಗಳನ್ನು ಅಳವಡಿಸಲಾಗಿರುತ್ತದೆ. ಈ ಮಾರ್ಗಸೂಚಿಗಳನ್ವಯ  ಸಂಪನ್ಮೂಲ ವ್ಯಕ್ತಿಗಳು ಆಯಾ ಇಎಲ್‌ಸಿ ಕೇಂದ್ರದ ಸಂಚಾಲಕರು ಮತ್ತು ನೋಡಲ್ ಅಧಿಕಾರಿಗಳಿಗೆ ಸೂಕ್ತ ತರಬೇತಿಯನ್ನು ನೀಡಿ, ಸೂಚಿತ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದು ಅಗತ್ಯವಿದೆ. ಚುನಾವಣಾ ಆಯೋಗದ ಆಶಯವನ್ನು ಕಾರ್ಯರೂಪ ತರುವಲ್ಲಿ ಎಲ್ಲಾ ಹಂತದ ಅಧಿಕಾರಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳ ಪ್ರಾಮಾಣಿಕ ಪ್ರಯತ್ನವನ್ನು  ನಿರೀಕ್ಷಿಸಿ, ಈ ಸಂಪನ್ಮೂಲ ಸಾಹಿತ್ಯವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ.

ಈ ಸಂಪನ್ಮೂಲ ಸಾಹಿತ್ಯವನ್ನು ಭಾಷಾಂತರ ಮಾಡಿ, ಪರಿಷ್ಕರಿಸಿ ಪ್ರಕಟಣೆ ಮಾಡಲು ಶ್ರಮಿಸಿದ ಎಲ್ಲಾ ಅಧಿಕಾರಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಅಭಿನಂದಿಸುತ್ತೇನೆ. ಈ ಮೂಲಕ ಭವಿಷ್ಯದ, ನೂತನ ಮತ್ತು ಯುವ ಮತದಾರರಲ್ಲಿ ಚುನಾವಣೆ ಪ್ರಕ್ರಿಯೆಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಮತ್ತು ಅರ್ಹ ಮತದಾರರ ಶೇ100ರಷ್ಟು ನೋಂದಣಿ ಮತ್ತು ಮತದಾನದ ಭರವಸೆಯನ್ನು ಈಡೇರಿಸುವಲ್ಲಿ ಮತದಾರ ಸಾಕ್ಷರತಾ ಸಂಘಗಳು ಕಾರ್ಯೋನ್ಮುಖವಾಗಿ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

**ಸಂಜೀವ್‌ಕುಮಾರ್,** ಭಾ.ಆ.ಸೇ

ಮುಖ್ಯ ಚುನಾವಣಾಧಿಕಾರಿ ಹಾಗೂ ಪದನಿಮಿತ್ತ ಅಪರ ಮುಖ್ಯ ಕಾರ್ಯದರ್ಶಿಗಳು.

ಸಿಆಸುಇ (ಚುನಾವಣೆಗಳು) ಕರ್ನಾಟಕ

# ಅನುವಾದ ಮತ್ತು ಪರಿಷ್ಕರಣೆ

## ಸಂಪನ್ಮೂಲ ವ್ಯಕ್ತಿಗಳು

**ಡಾ. ನಿತ್ಯಾನಂದಾರಾಧ್ಯ**
ಹಿರಿಯ ಸಹಾಯಕ ನಿರ್ದೇಶಕರು (ಯೋಜನೆ),
ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ. ಬೆಂಗಳೂರು

**ಶ್ರೀ. ವೀರಣ್ಣ ಎಸ್. ಜತ್ತಿ**
ರೀಡರ್, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ
ಜಮಖಂಡಿ, ಬಾಗಲಕೋಟೆ ಜಿಲ್ಲೆ

**ಡಾ. ಹೆಚ್.ಬಿ. ಚಂದ್ರಶೇಖರ್**
ಹಿರಿಯ ಸಹಾಯಕ ನಿರ್ದೇಶಕರು
ಡಿಎಸ್‌ಇಆರ್‌ಟಿ, ಬೆಂಗಳೂರು

**ಶ್ರೀಮತಿ. ಶಾಂತ**
ಹಿರಿಯ ಸಹಾಯಕ ನಿರ್ದೇಶಕರು
ತೋಟಗಾರಿಕೆ ಇಲಾಖೆ, ಮಂಡ್ಯ

**ಶ್ರೀ. ಹರಿಪ್ರಸಾದ್ ಜಿ.ವಿ**
ಹಿರಿಯ ಉಪನ್ಯಾಸಕರು,
ಜಿಲ್ಲಾ ಶಿಕ್ಷಣ ಮತ್ತು ಶಿಕ್ಷಕರ ತರಬೇತಿ ಕೇಂದ್ರ,
ಶಿವಮೊಗ್ಗ

**ಶ್ರೀ. ಸತೀಶ್‌ಕುಮಾರ್. ಸಿ.ಎಲ್**
ಉಪನ್ಯಾಸಕರು,
ಸರ್ಕಾರಿ ಪದವಿ ಪೂರ್ವಕಾಲೇಜು,
ಚಿಕ್ಕಬಳ್ಳಾಪುರ

**ಶ್ರೀ. ಟಿ.ಕೆ. ರಾಘವೇಂದ್ರ**
ಹಿರಿಯ ಉಪನ್ಯಾಸಕರು,
ಜಿಲ್ಲಾ ಶಿಕ್ಷಣ ಮತ್ತು ಶಿಕ್ಷಕರ ತರಬೇತಿ ಕೇಂದ್ರ, ಶಿವಮೊಗ್ಗ

**ಡಿಟಿಪಿ: ಪ್ಯಾರಾಮೌಂಟ್ ಕಲರ್ ಗ್ರಾಫಿಕ್ಸ್**
#808, 14ನೇ ಮುಖ್ಯರಸ್ತೆ, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

## ಮಾರ್ಗದರ್ಶನ

**ಶ್ರಿ ಸಂಜೀವ್‌ಕುಮಾರ್. ಭಾ.ಆ.ಸೇ**
ಮುಖ್ಯ ಚುನಾವಣಾಧಿಕಾರಿ ಹಾಗೂ ಪದನಿಮಿತ್ತ ಹೆಚ್ಚುವರಿ ಅಪರ ಮುಖ್ಯ ಕಾರ್ಯದರ್ಶಿಗಳು.
ಸಿಆಸುಇ (ಚುನಾವಣೆಗಳು) ಕರ್ನಾಟಕ

**ಶ್ರಿ ಡಾ. ಅಜಯ್ ನಾಗಭೂಷಣ್. ಭಾ.ಆ.ಸೇ**
ಅಪರ ಮುಖ್ಯ ಚುನಾವಣಾಧಿಕಾರಿಗಳು

**ಶ್ರೀ ಸೂರ್ಯಸೇನ. ಭಾ.ಅ.ಸೇ**
ಜಂಟಿ ಮುಖ್ಯ ಚುನಾವಣಾಧಿಕಾರಿಗಳು

**ಶ್ರೀ. ಪಿ.ಎಸ್. ವಸ್ತ್ರದ. ಭಾ.ಆ.ಸೇ(ನಿವೃತ್ತ)**
ಹಿರಿಯ ಸಮಾಲೋಚಕರು – ಸ್ವೀಪ್
ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಬೆಂಗಳೂರು

# ವಿಷಯಸೂಚಿ


1. ಪೀಠಿಕೆ ........ 07
2. ಉದ್ದೇಶಗಳು ........ 07
3. ಸದಸ್ಯರು ........ 08
4. ರಚನೆ ........ 08
5. ನೋಡಲ್ ಅಧಿಕಾರಿ ಮತ್ತು ಮಾರ್ಗದರ್ಶಕ ........ 08
6. ಕಾರ್ಯಕಾರಿ ಸಮಿತಿ ........ 09
7. ಸಂಚಾಲಕರು ........ 10
8. ಕಛೇರಿಯ ಅವಧಿ ........ 11
9. ಸ್ಥಳ ........ 11
10. ಇ.ಎಲ್.ಸಿ. ಅವಧಿಗಳು ........ 11
11. ಚಟುವಟಿಕೆಗಳು ........ 11
12. ಸಾಮಾಜಿಕ ಮಾಧ್ಯಮ ಮತ್ತು ತಲುಪುವಿಕೆ ........ 12
13. ಕಡ್ಡಾಯ ನಿಯಮಗಳು ........ 12
14. ವಿಕಲಚೇತನರೊಂದಿಗೆ ವಿದ್ಯಾರ್ಥಿಗಳ ಒಳಗೊಳ್ಳುವಿಕೆ ........ 13
15. ಸೂಚನೆಗಳೊಂದಿಗೆ ಚಟುವಟಿಕೆಗಳು ........ 14
    - i) ಪ್ರಜಾಪ್ರಭುತ್ವದ ಗೋಡೆ ........ 15
    - ii) ಬ್ಯಾಲಟ್ ಬಿಸ್ಟ್ರೊ ........ 18
    - iii) ಯುವ ಮತದಾರರ ಹಬ್ಬ ಅಥವಾ ಯುವಮತದಾತ ಮಹೋತ್ಸವ ........ 20
    - iv) ವಿಶೇಷ ಅಭಿಯಾನ ........ 23
    - v) ಚರ್ಚಾಸ್ಪರ್ಧೆ/ ಆಶುಭಾಷಣ ಸ್ಪರ್ಧೆ ........ 24
    - vi) ರಾಷ್ಟ್ರೀಯ ಮತದಾರರ ದಿನದ ಆಚರಣೆ ........ 25
    - vii) ಪ್ರೇರಕರ ಆಹ್ವಾನ ........ 26
    - viii) ಕಾಲೇಜ್ ಮ್ಯಾಗಜೈನ್‌ನಲ್ಲಿ ಕಥಾ ಲೇಖನಗಳು ........ 26
    - ix) ಸಾಮಾಜಿಕ ಮಾಧ್ಯಮ ಆಧಾರಿತ ಚಟುವಟಿಕೆ ........ 27
16. ಪ್ರಸ್ತಾವಿತ ಚಟುವಟಿಕೆಗಳ ಪಟ್ಟಿ ........ 28
17. ಸಂಪನ್ಮೂಲಗಳು ........ 29




ಯಾವ ಮತದಾರನು ಮತದಾನದಿಂದ ಹೊರಗುಳಿಯಬಾರದು

## 1. ಮತದಾರ ಸಾಕ್ಷರತಾ ಸಂಘಗಳು – ಪೀಠಿಕೆ

ಮತದಾರ ಸಾಕ್ಷರತಾ ಸಂಘಗಳನ್ನು ಆಸಕ್ತಿದಾಯಕ ಚಟುವಟಿಕೆಗಳು ಮತ್ತು ಪ್ರತ್ಯಕ್ಷ ಅನುಭವಗಳ ಮೂಲಕ ಆದರೆ ತಟಸ್ಥ ಹಾಗೂ ಪಕ್ಷಾತೀತವಲ್ಲದ ರೀತಿಯಲ್ಲಿ ಭಾರತೀಯ ಪ್ರಜೆಗಳ ಎಲ್ಲಾ ಗುಂಪಿನಲ್ಲಿ ಮತದಾರ ಸಾಕ್ಷರತೆಯನ್ನು ಉತ್ತೇಜಿಸುವುದು.

ಮತದಾರ ಸಾಕ್ಷರತಾ ಸಂಘಗಳನ್ನು ವಿಶೇಷವಾಗಿ ಅವರ ಪದವಿಯನ್ನು ಪಡೆಯುತ್ತಿರುವ ಹೊಸ ಮತದಾರರನ್ನು ಗುರಿಯಾಗಿರಿಸಿಕೊಂಡು ಭಾರತಾದ್ಯಂತ ಕಾಲೇಜುಗಳಲ್ಲಿ ಸ್ಥಾಪಿಸಲಾಗುತ್ತಿದೆ. (18–21 ವಯೋಮಾನ ಗುಂಪಿನಲ್ಲಿರುವವರು).

ಈ ಸಂಘವು ಎಲ್ಲಾ ಸೆಮಿಸ್ಟರ್‌ಗಳಿಂದ ವಿದ್ಯಾರ್ಥಿಗಳನ್ನು ತನ್ನ ಸದಸ್ಯರನ್ನಾಗಿ ಹೊಂದಿರುವುದು. ಕೆಳಕಂಡ ವಿಭಾಗಗಳು ಇ.ಎಲ್.ಸಿ.ಯು ಹೇಗೆ ಸ್ಥಾಪಿತವಾಗುವುದು, ಇದರಲ್ಲಿ ಭಾಗವಹಿಸುವವರು ಯಾರು, ಅದನ್ನು ಎಲ್ಲಿ ಹಾಗೂ ಹೇಗೆ ನಿರ್ವಹಿಸಲ್ಪಡಲಾಗುವುದು ಮತ್ತು ಯಾವ ಚಟುವಟಿಕೆಗಳನ್ನು ಅದು ಒಳಗೊಂಡಿರುತ್ತದೆ ಎಂಬ ವಿವರಗಳನ್ನು ಚರ್ಚಿಸಲಾಗುವುದು.

## 2. ಉದ್ದೇಶಗಳು

I. ಪ್ರತ್ಯಕ್ಷ ಅನುಭವದ ಮೂಲಕ ಮತದಾರ ನೋಂದಣಿ, ಮತದಾನ ಪ್ರಕ್ರಿಯೆ ಮತ್ತು ಸಂಬಂಧಿತ ವಿಷಯಗಳ ಬಗ್ಗೆ ಉದ್ದೇಶಿತ ಜನಸಂಖ್ಯೆಯನ್ನು ಸಾಕ್ಷರರನ್ನಾಗಿಸುವುದು

II. ಭಾಗವಹಿಸುವವರಿಗೆ ಇ.ವಿ.ಎಂ. ಮತ್ತು ವಿ.ವಿ.ಪ್ಯಾಟ್ ಬಗ್ಗೆ ಪರಿಚಯಿಸುವುದು ಮತ್ತು ಇ.ವಿ.ಎಂ.ಗಳನ್ನು ಬಳಸಿ ಮತದಾನ ಪ್ರಕ್ರಿಯೆಯ ಭದ್ರತೆ ಮತ್ತು ದೃಢತೆಯ ಬಗ್ಗೆ ಅವರನ್ನು ಜಾಗೃತ ಗೊಳಿಸುವುದು.

III. ಉದ್ದೇಶಿತ ಮತದಾರರು ಅವರ ಮತದ ಮೌಲ್ಯವನ್ನು ಮತ್ತು ಅವರ ಮತದಾನದ ಹಕ್ಕನ್ನು ವಿಶ್ವಾಸದಿಂದ, ಆರಾಮದಾಯಕವಾಗಿ ಮತ್ತು ನೈತಿಕ ರೀತಿಯಲ್ಲಿ ಚಲಾಯಿಸುವುದನ್ನು ಅರ್ಥಮಾಡಿಕೊಳ್ಳಲು ನೆರವಾಗುವುದು.

IV. ಸಮುದಾಯಕ್ಕೆ ಮತದಾರ ಸಾಕ್ಷರತೆಯನ್ನು ಕೊಂಡೊಯ್ಯುವುದಕ್ಕಾಗಿ ಇ.ಎಲ್.ಸಿ. ಸದಸ್ಯರ ಸಾಮರ್ಥ್ಯವನ್ನು ಬಳಸಿಕೊಳ್ಳುವುದು.

V. ಇನ್ನೂ ನೋಂದಣಿ ಮಾಡಿಸದೇ ಇರುವಂತಹ ತನ್ನ ಅರ್ಹ ಸದಸ್ಯರುಗಳಿಗೆ ಮತದಾರ ನೋಂದಣಿಗೆ ಸಹಕರಿಸುವುದು.

VI. ಮತದಾರ ಭಾಗವಹಿಸುವಿಕೆಯ ಸಂಸ್ಕೃತಿ ಮತ್ತು ಮಾಹಿತಿ ನೀಡಿದ ಹಾಗೂ ನೈತಿಕ ಮತದಾನ ಮತ್ತು *"ಪ್ರತಿಯೊಂದು ಮತವೂ ಪರಿಗಣಿಸಲ್ಪಡುವುದು"* ಮತ್ತು *"ಯಾವುದೇ ಮತದಾರನೂ ಮತದಾನದಿಂದ ಹೊರಗುಳಿಯಬಾರದು"* ಎಂಬ ತತ್ವವನ್ನು ಅನುಸರಿಸಲು ಅಭಿವೃದ್ಧಿಪಡಿಸುವುದು.

## 3. ಸದಸ್ಯರು

ಸಂಘವು ವಿದ್ಯಾರ್ಥಿಗಳನ್ನು ತನ್ನ ಸದಸ್ಯರನ್ನಾಗಿ ಹೊಂದುವುದು. ಯಾರೊಬ್ಬರೂ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಅವನ/ಅವಳ ನೋಂದಣಿ ಮಾಡಿಕೊಳ್ಳುವ ಮೂಲಕ ಸದಸ್ಯರಾಗಬಹುದು. ಒಮ್ಮೆ ನೋಂದಣಿಯಾದ ಬಳಿಕ, ಅವನ/ಅವಳ ಪದವಿ ಅವಧಿಯು ಪೂರ್ಣಗೊಳ್ಳುವವರೆವಿಗೆ ಅವನು/ಅವಳನ್ನು ಸದಸ್ಯನೆಂದು ಪರಿಗಣಿಸಲಾಗುವುದು.

## 4. ರಚನೆ

ಇ.ಎಲ್.ಸಿ.ಯು ಕಾಲೇಜು ಅಥವಾ ಸಂಸ್ಥೆಯ ಹೆಸರಿನನ್ವಯ ಕರೆಯಲ್ಪಡಬಹುದು ಮತ್ತು ನೋಡಲ್ ಅಧಿಕಾರಿಯ ಮೂಲಕ ಸ್ಥಾಪಿತವಾಗುವುದು ಮತ್ತು ಸಂಯೋಜಿಸಲ್ಪಡುವುದು. ಇ.ಎಲ್.ಸಿ.ಯು ಪ್ರತಿ ಕಾಲೇಜಿಗೆ ಒಂದರಂತೆ ಪ್ರಸ್ತಾಪಿಸಲಾಗಿದೆ. ಆದಾಗ್ಯೂ, ವಿಶ್ವವಿದ್ಯಾನಿಲಯದೊಳಗೆ ವಿಭಿನ್ನ ಶಾಲೆಗಳು/ ಇಲಾಖೆಗಳಿಗಾಗಿ ಅದೇ ಅಧ್ಯಾಯಗಳನ್ನು ಪರಿಚಯಿಸಬಹುದು. ಆ ಸಂಸ್ಥೆಯು ಸದಸ್ಯರ ಅನುಕೂಲಗಳಿಗನ್ವಯ ಹೇಗೆ ಮುಂದುವರಿಯಬೇಕೆಂದು ನಿರ್ಧರಿಸಬಹುದು.

## 5. ನೋಡಲ್ ಅಧಿಕಾರಿ / ಮಾರ್ಗದರ್ಶಕ

ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಒಬ್ಬರು ಅಥವಾ ಇಬ್ಬರು ಉಪನ್ಯಾಸಕರು ಇ.ಎಲ್.ಸಿ.ಯ ನೋಡಲ್ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುವರು. ಅವರು ಆ ಇ.ಎಲ್.ಸಿ.ಯ ಮಾರ್ಗದರ್ಶಿಗಳಾಗಿಯೂ ಸಹ ಕಾರ್ಯನಿರ್ವಹಿಸುವರು. ಚುನಾವಣಾ ಕರ್ತವ್ಯದ ಅನುಭವವಿರುವ ಉಪನ್ಯಾಸಕರಿಗೆ ಈ ಕಾರ್ಯಕ್ಕಾಗಿ ಆದ್ಯತೆ ನೀಡುವುದು. ಅವರ ಪಾತ್ರವು ಇವುಗಳಿಗೆ ಒತ್ತುನೀಡುವುದು.

I. ಸಂಘದ ದಾಖಲಾತಿ ಉತ್ತೇಜಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.

II. ಚುನಾವಣೆಯ ಮೇಲ್ವಿಚಾರಣೆ ಮಾಡುವುದು ಮತ್ತು ಇ.ಎಲ್.ಸಿ.ಯ ಕಾರ್ಯಕಾರಿ ಸಮಿತಿಯನ್ನು ರಚಿಸುವುದು.

III. ಜಿಲ್ಲಾ ಚುನಾವಣಾ ಅಧಿಕಾರಿ ಮತ್ತು ಇ.ಎಲ್.ಸಿ.ಯ ನಡುವೆ ಸಂಪನ್ಮೂಲಗಳು, ಮಾಹಿತಿ ಇತ್ಯಾದಿ ವಿನಿಮಯಗಳಿಗಾಗಿ ಸಮನ್ವಯ ಮಾಡುವರು.



IV. ಹೊಸ ಸಂಪನ್ಮೂಲಗಳನ್ನು ಸಂಗ್ರಹಿಸಲು ಪ್ರಯತ್ನಿಸುವುದು ಮತ್ತು ಅವುಗಳನ್ನು ಜಿಲ್ಲಾ ಚುನಾವಣಾ ಅಧಿಕಾರಿಗಳಿಗೆ ಕಳುಹಿಸುವುದು.

V. ಕಾರ್ಯಕಾರಿ ಸಭೆಯ ಮೂಲಕ ವಾರ್ಷಿಕ ಚಟುವಟಿಕೆಗಳ ಪಂಚಾಂಗ ಅಭಿವೃದ್ಧಿಯ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಮಾಡುವುದು.

***ಸೂಚನೆ:*** ***ನೋಡಲ್ ಅಧಿಕಾರಿಯು ಇ.ಎಲ್.ಸಿ. ಕಾರ್ಯಾಚರಣೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ತೊಡಗಿಸಿಕೊಳ್ಳಲು ಮುಕ್ತರಾಗಿರುವರು.***

## 6. ಕಾರ್ಯಕಾರಿ ಸಮಿತಿ

I. ಸಂಘವು ಪ್ರತಿ ತರಗತಿಯಿಂದ ಚುನಾಯಿತರಾದ ಪ್ರತಿನಿಧಿಗಳೊಂದಿಗೆ ಇ.ಎಲ್.ಸಿ. ಸದಸ್ಯ ವಿದ್ಯಾರ್ಥಿಗಳ ನಡುವಿನಿಂದ ಚುನಾಯಿತ ಮಂಡಳಿಯ ಮೂಲಕ ನಡೆಸಲ್ಪಡುವುದು.

II. ಈಗಾಗಲೇ ಮತದಾರರಾಗಿ ದಾಖಲಾಗಿರುವಂತಹ ವಿದ್ಯಾರ್ಥಿಗಳು ಮಾತ್ರ ಸಮಿತಿಯ ಸದಸ್ಯರಾಗಬಹುದು.

III. ಸಮಿತಿಯು ಯಾವುದೇ ರಾಜಕೀಯ ಪ್ರೇರಿತ ವಿದ್ಯಾರ್ಥಿಯನ್ನು ಒಳಗೊಂಡಿರಬಾರದು. ಆದಾಗ್ಯೂ, ರಾಜಕೀಯ ಒಡನಾಟದೊಂದಿಗಿನ ವಿದ್ಯಾರ್ಥಿಗಳನ್ನು ಇ.ಎಲ್.ಸಿ.ಯು ತನ್ನದೇ ಸಾಮಾನ್ಯ ಸದಸ್ಯರನ್ನಾಗಿ ಅವರನ್ನು ದಾಖಲು ಮಾಡಿಕೊಳ್ಳಬಹುದು.

IV. ಚುನಾಯಿತ ಪ್ರತಿನಿಧಿಗಳು ಇ.ಎಲ್.ಸಿ.ಯ ಕಾರ್ಯಕಾರಿ ಸಮಿತಿಯನ್ನು ರಚಿಸುವುದು.

V. ಚುನಾಯಿತ ಪ್ರತಿನಿಧಿಗಳು ಪ್ರತಿನಿಧಿಗಳಲ್ಲಿ ಒಬ್ಬರನ್ನು ತನ್ನ ಅಧ್ಯಕ್ಷರನನ್ನಾಗಿಯೂ ಹಾಗೂ ಇನ್ನೊಬ್ಬರನ್ನು ಉಪಾಧ್ಯಕ್ಷನನ್ನಾಗಿಯೂ ಆಯ್ಕೆ ಮಾಡಬಹುದು.

VI. ಕಾರ್ಯಕಾರಿ ಸಮಿತಿಯು ನೋಡಲ್ ಅಧಿಕಾರಿಯ ಮಾರ್ಗದರ್ಶನ ಸಮಾಲೋಚನೆ ಮತ್ತು ಮೇಲ್ವಿಚಾರಣೆಯಡಿ ಇ.ಎಲ್.ಸಿ.ಯ ಚಟುವಟಿಕೆಯ ವ್ಯವಸ್ಥೆಗೊಳಿಸುವುದಕ್ಕಾಗಿ ಜವಾಬ್ದಾರಿಯಾಗಿರುವುದು.

VII. ಇ.ಎಲ್.ಸಿ. ಸದಸ್ಯರ ನಡುವೆ ಮತದಾರ ಭಾಗವಹಿಸುವಿಕೆಯ ಸಂಸ್ಕೃತಿಯನ್ನು ಮುನ್ನಡೆಸಲು ಚುನಾಯಿತ ಮಂಡಳಿಯು ಪ್ರಯತ್ನಿಸುವುದು ಮತ್ತು ಕೆಳಗಿನ ಪಾತ್ರವನ್ನು ಹೊಂದುವುದು.

i. ಸಂಘದ ದಾಖಲಾತಿ ವ್ಯವಸ್ಥೆಗೊಳಿಸುವುದು.

ii. ಇ.ಎಲ್.ಸಿ.ಗಾಗಿ ಚಟುವಟಿಕೆಗಳನ್ನು ಆಯೋಜಿಸುವುದು ಮತ್ತು ವಾರ್ಷಿಕ ಚಟುವಟಿಕೆಗಳ ಪಂಚಾಂಗವನ್ನು ಅಭಿವೃದ್ಧಿಗೊಳಿಸುವುದು.

iii. ಇ.ಎಲ್.ಸಿ. ಚಟುವಟಿಕೆಗಳನ್ನು ಸುಗಮವಾಗಿ ನಿರ್ವಹಿಸುವುದಕ್ಕಾಗಿ ಇನ್ನಿತರ ಮಾರ್ಗದರ್ಶಿಗಳನ್ನು ರಚಿಸುವುದು.

iv. ಪಂಚಾಂಗ ಅನ್ವಯ ಚಟುವಟಿಕೆಗಳನ್ನು ನಿರ್ವಹಿಸಲು ಮೇಲ್ವಿಚಾರಣೆ ನಡೆಸುವುದು.

v. ಇ.ಎಲ್.ಸಿ. ಸಂಪನ್ಮೂಲಗಳನ್ನು ಸಂಗ್ರಹಿಸುವುದು.

vi. ಮತದಾರರಾಗಿ ನೋಂದಾಯಿಸದಿರುವ ವಿದ್ಯಾರ್ಥಿಗಳ ದಾಖಲಾತಿಗೆ ಸಹಕರಿಸುವುದು.

## 7. ಸಂಚಾಲಕರು

ಕ್ಯಾಂಪಸ್ ರಾಯಭಾರಿ(ಗಳು) ನೇಮಕವಾಗಿರುವಲ್ಲಿ ಅವರು ಇ.ಎಲ್.ಸಿ.ಯ ಸಂಚಾಲಕರಾಗಿ ಕಾರ್ಯನಿರ್ವಹಿಸುವರು ಮತ್ತು ನೋಡಲ್ ಅಧಿಕಾರಿಗಳಿಗೆ ಅವರ ಕಾರ್ಯನಿರ್ವಹಣೆಗೆ ನೆರವಾಗುವರು. ಕ್ಯಾಂಪಸ್ ರಾಯಭಾರಿ(ಗಳು) ಎಲ್ಲಿ ನೇಮಕವಾಗಿರುವುದಿಲ್ಲವೋ ಅಂತಹ ಕಡೆ ನೋಡಲ್ ಅಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯು ಆಸಕ್ತಿಯಿರುವ ವಿದ್ಯಾರ್ಥಿಯನ್ನು (ಗಳನ್ನು) ಸಂಚಾಲಕರಾಗಿ ನೇಮಕಮಾಡಬಹುದು. ಸಂಚಾಲಕರು ಇವುಗಳಿಗೆ ಜವಾಬ್ದಾರರಾಗಿರುವರು:

I. ಇ.ಎಲ್.ಸಿ.ಯ ವಿವಿಧ ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸಲು ವಿದ್ಯಾರ್ಥಿಗಳನ್ನು ಗುರ್ತಿಸುವುದು ಮತ್ತು ಅವರನ್ನು ತೊಡಗಿಸಿಕೊಳ್ಳುವುದು.

II. ಕಾರ್ಯಕಾರಿ ಸಮಿತಿ ಮತ್ತು ಮಾರ್ಗದರ್ಶಿ/ ನೋಡಲ್ ಅಧಿಕಾರಿಯ ಪೂರ್ಣ ಮಾರ್ಗದರ್ಶನದಡಿ ಚಟುವಟಿಕೆಗಳನ್ನು ನಿರ್ವಹಿಸುವುದು.

III. ಕಾರ್ಯಕಾರಿ ಸಮಿತಿ ಮತ್ತು ಮಾರ್ಗದರ್ಶಿ/ ನೋಡಲ್ ಅಧಿಕಾರಿಯ ಮೂಲಕ ಇತರೆ ಯಾವುದೇ ಕಾರ್ಯಚಟುವಟಿಕೆಗಳು.

## 8. ಕಛೇರಿಯ ಅವಧಿ

I. ಚುನಾವಣಾ ಸಾಕ್ಷರತಾ ಸಂಘದ ಕಾರ್ಯಕಾರಿ ಸಮಿತಿ ಮತ್ತು ಸಂಚಾಲಕರು ತಾವು ಆ ಹುದ್ದೆಯನ್ನು ವಹಿಸಿಕೊಂಡ ದಿನದಿಂದ ಒಂದು ವರ್ಷ ಹಾಗೂ ಎರಡು ವರ್ಷದವರೆಗೆ ವಿಸ್ತರಿಸಿದ ಅವಧಿಯನ್ನು ಹೊಂದಿರುವರು. ಕಛೇರಿಯ ಅವಧಿಯ ಅಂತಿಮ ನಿರ್ಧಾರವು ನೋಡಲ್ ಅಧಿಕಾರಿಯೊಂದಿಗಿರುತ್ತದೆ.

II. ಪ್ರತಿನಿಧಿಯು ಇ.ಎಲ್.ಸಿ.ಯ ಸದಸ್ಯನಾಗಿ ನೋಂದಾಯಿಸಿಕೊಳ್ಳತಕ್ಕದ್ದು.

## 9. ಸ್ಥಳ

ಇ.ಎಲ್.ಸಿ.ಯ ಸಭೆಗೆ ತರಗತಿಯ ನಂತರ ಬಳಸಲ್ಪಡಬಹುದಾದಂತಹ ತರಗತಿ ಕೊಠಡಿಗಳಲ್ಲಿ ಯಾವುದಾದರೂ ಒಂದು ಸ್ಥಳವಾಗಿರುತ್ತದೆ ಅಥವಾ ಕಾರ್ಯಕಾರಿ ಸಮಿತಿಯ ಮೂಲಕ ನಿರ್ಧರಿಸಲಾದಂತಹ ಯಾವುದೇ ಸ್ಥಳವಾಗಿರುವುದು. ವಿವಿಧ ಚಟುವಟಿಕೆಗಳ ಮೇಲೆ ಅವಲಂಭಿತವಾದ ಬದಲಾವಣೆಗಳಿಗೆ ಅನುಗುಣವಾಗಿ ಸಹ ಸ್ಥಳವಾಗಿರುತ್ತದೆ.

## 10. ಇ.ಎಲ್.ಸಿ. ಅವಧಿಗಳು

ಅಲ್ಲಿ ಚಟುವಟಿಕೆ ಆಧಾರಿತ ಅವಧಿಗಳಿರಬೇಕು. ಅವುಗಳಿಗೆ ಶೈಕ್ಷಣಿಕ ವರ್ಷದಲ್ಲಿ ಒಟ್ಟಾರೆ 8–10 ಗಂಟೆಗಳ ನಡುವಿನ ಶ್ರೇಣಿಯಲ್ಲಿ ಗಂಟೆಗಳು/ ಅವಧಿಗಳನ್ನು ಗುರ್ತಿಸುವುದು. ಇ.ಎಲ್.ಸಿ.ಯು ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗೂ (ಸಾಮಾನ್ಯವಾಗಿರುವುದು) ಒಂದೇ ತೆರನಾಗಿರುವುದು.

## 11. ಚಟುವಟಿಕೆಗಳು

ಈ ಕಾಲೇಜುಗಳಿಗಾಗಿ ಈ ಚುನಾವಣಾ ಸಾಕ್ಷರತಾ ಮಾರ್ಗದರ್ಶಿ ಪುಸ್ತಕವು ಚಟುವಟಿಕೆಗಳು ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿರುವುದು. ಕಾರ್ಯಕಾರಿ ಸಮಿತಿಯು ಈ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಹಾಗೂ ಮಾರ್ಪಡಿಸಲು ಅಥವಾ ಮತದಾರ ಶಿಕ್ಷಣಕ್ಕೆ ಪೂರಕವಾಗಿರುವಂತಹ ಈ ಚಟುವಟಿಕೆಗಳಲ್ಲಿ ಗೋಡೆ

ಭಿತ್ತಿಪತ್ರ (ಮ್ಯಾಗಜೈನ್) ಚಟುವಟಿಕೆಯು ಸಂಘದಲ್ಲಿ ಮಾಸಿಕವಾಗಿ ನಿರ್ವಹಿಸುವ ಸ್ವರೂಪವನ್ನು ಹೊಂದಿದೆ. ಮತಪತ್ರ ಸ್ಥಳ (Ballot Bistro) ಮತ್ತು ವಿಶೇಷ ನೋಂದಣಿ ಆಂದೋಳನವು ಕಡ್ಡಾಯ ಚಟುವಟಿಕೆಗಳಾಗಿರುವುದು.

## 12. ಸಾಮಾಜಿಕ ಮಾಧ್ಯಮ ಉಪಸ್ಥಿತಿ ಮತ್ತು ತಲುಪುವುದು

I. ಇ.ಎಲ್.ಸಿ. ಕಾರ್ಯಕಾರಿ ಸಮಿತಿಯು ಸಮಂಜಸ ವಿಷಯಾಂಶವನ್ನು (ಕಾರ್ಯಕ್ರಮದ ಪ್ರಕಟಣೆಗಳು, ಆನ್‌ಲೈನ್/ ಆಫ್‌ಲೈನ್ ಸ್ಪರ್ಧೆಗಳು, ನೋಂದಣಿ ಅಭಿಯಾನಗಳು ಇತ್ಯಾದಿ ನಿಯತವಾಗಿ ಬದ್ಧತೆಯ ಫೇಸ್‌ಬುಕ್ ಪೇಜ್ ಮತ್ತು ಗ್ರೂಪ್, ಯೂಟ್ಯೂಬ್ ಚಾನಲ್) ನೋಡಲ್ ಅಧಿಕಾರಿ/ ಮಾರ್ಗದರ್ಶಿ ಶಾಶ್ವತ ಮತ್ತು ಪ್ರಸ್ತುತ ಸಮಿತಿ (1ವರ್ಷದ ಅವಧಿ) ಯಿಂದ ನಿರೂಪಿಸಿರುವುದನ್ನು ಭಿತ್ತರಿಸುವುದು.

II. ಹೆಚ್ಚುವರಿಯಾಗಿ, ಕಾರ್ಯಕಾರಿ ಸಮಿತಿಯ ನಿರ್ವಹಣೆ ಮತ್ತು ಬದ್ಧತೆಯ ಪಿಂಟರೆಸ್ಟ್ ಬೋರ್ಡ್ ಮತ್ತು ಇನ್‌ಸ್ಟಾಗ್ರಾಂ ಪ್ರೊಫೈಲ್ ಮೇಲೆ ನಿಯತವಾಗಿ ಸಮಂಜಸ ಅಂತರ್ ಕ್ರಿಯಾ ಸಾಮಗ್ರಿಗಳನ್ನು ಭಿತ್ತರಿಸುವುದನ್ನು ನಿರೀಕ್ಷಿಸುತ್ತದೆ. ಅತ್ಯುತ್ತಮ ತೀರ್ಮಾನ, ನಿಶ್ಚಯ ತಟಸ್ಥತೆ ಮತ್ತು ಆನ್‌ಲೈನ್ ವೇದಿಕೆಯಲ್ಲಿ ಯಾವುದೇ ವಿಷಯಾಂಶವನ್ನು ವೀಕ್ಷಿಸತಕ್ಕದ್ದು.

III. ಕಾಲೇಜ್/ ವಿಶ್ವವಿದ್ಯಾನಿಲಯದ ಇ.ಎಲ್.ಸಿ. ಫೇಸ್‌ಬುಕ್ ಮತ್ತು ಯೂಟ್ಯೂಬ್ ಪ್ರೊಫೈಲ್‌ಗಳೊಂದಿಗೆ ಭಾರತ ಚುನಾವಣಾ ಆಯೋಗದ ಫೇಸ್‌ಬುಕ್ ಪುಟ ಮತ್ತು ಯೂಟ್ಯೂಬ್ ಚಾನೆಲ್‌ಗಳೊಂದಿಗೆ ಸಮಗ್ರಗೊಳಿಸುವುದು.

***ಸೂಚನೆ:* ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಇ.ಎಲ್.ಸಿ.ಗಳು ಇತರೆ ಆನ್‌ಲೈನ್ ಸೌಲಭ್ಯ ಮತ್ತು ಸಾಮಾಜಿಕ ಮಾಧ್ಯಮ ಜಾಲ ವೇದಿಕೆಗಳನ್ನು ತಲುಪಲು ಅವುಗಳನ್ನು ವಿಸ್ತಾರಗೊಳಿಸಲು ಮುಕ್ತವಾಗಿದ್ದು, ನೋಡಲ್ ಅಧಿಕಾರಿಯು ಆನ್‌ಲೈನ್ ವಿಷಯಗಳನ್ನು ಹಂಚಿಕೊಳ್ಳುವಲ್ಲಿ ಪಕ್ಷಾತೀತವಲ್ಲದ ಸ್ವರೂಪವನ್ನು ಖಾತರಿಪಡಿಸುವುದು.**

## 13. ಕಡ್ಡಾಯ ನಿಯಮಗಳು

I. ಇ.ಎಲ್.ಸಿ.ಯು ಯಾವುದೇ ರಾಜಕೀಯ ಪಕ್ಷ ಅಥವಾ ರಾಜಕೀಯ ಗುಂಪುಗಳೊಂದಿಗೆ ಸಂಬಂಧವನ್ನು ಹೊಂದಿರಬಾರದು.

II. ಇ.ಎಲ್.ಸಿ.ಯು ಯಾವುದೇ ಚಟುವಟಿಕೆಗಳು (ಪ್ರೇರಕರ ಆಹ್ವಾನ, ಬ್ಯಾಲಟ್ ಬಿಸ್ಟ್ರೋ, ಇತರೆ ಸಾಂಸ್ಕೃತಿಕ ಚಟುವಟಿಕೆಗಳು) ಯಾವುದೇ ರೀತಿಯಲ್ಲಿಯೂ ಪಕ್ಷಪಾತಿ ಬಲವನ್ನು ಹೊಂದಿರತಕ್ಕದ್ದಲ್ಲ.

III. ಭಾಗವಹಿಸುವಿಕೆಗೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳು ಅವರ ರಾಜಕೀಯ ಮಾನ್ಯತೆಯನ್ನು ಹೊರತುಪಡಿಸಿ ಇ.ಎಲ್.ಸಿ. ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮುಕ್ತರಾಗಿರುವರು.

IV. ತನ್ನ ಅವಧಿಯು ಪೂರ್ಣಗೊಂಡ ನಂತರ ವಾರ್ಷಿಕ ವರದಿಯನ್ನು ಸಿದ್ಧಪಡಿಸುವುದು ಕಾರ್ಯಕಾರಿ ಸಮಿತಿಯ ಕರ್ತವ್ಯವಾಗಿದೆ. ವಾರ್ಷಿಕ ವರದಿಯು ಇ.ಎಲ್.ಸಿ.ಯು ವರ್ಷವಿಡೀ ನಿರ್ವಹಿಸಲಾದ ಚಟುವಟಿಕೆಗಳು, ನಿಭಾಯಿಸಲಾದ ಕರ್ತವ್ಯಗಳು ಮತ್ತು ಇ.ಎಲ್.ಸಿ.ಯಿಂದ ದಾಖಲಾದ ಫಲಿತಾಂಶಗಳ ಪೂರ್ಣ(ಆನ್‌ಲೈನ್ ಮತ್ತು ಆಫ್‌ಲೈನ್)ವಿವರಗಳನ್ನು ಹೊಂದಿರುವುದು. ಇದು ಸಂಬಂಧಿಸಿದ ಡಿಇಒಗೆ ನೋಡಲ್ ಅಧಿಕಾರಿಯ ಮೂಲಕ ಸಲ್ಲಿಸಬಹುದು.

## 14. ವಿಕಲಚೇತನರೊಂದಿಗೆ ವಿದ್ಯಾರ್ಥಿಗಳನ್ನು ಒಳಗೊಳ್ಳಿಸುವಿಕೆ

ಇ.ಎಲ್.ಸಿ.ಯು ವಿಕಲಚೇತನರೊಂದಿಗೆ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಖಾತರಿಪಡಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲೇ ಬೇಕಾದಂಹ ಒಂದು ಸಮನ್ವಯ ಸಂಘವಾಗಿರುವುದು.

- ಸಂಚಾಲಕರು ಒಳಗೊಳ್ಳುವಿಕೆಯನ್ನು ಉತ್ತೇಜಿಸಲು ಮತ್ತು ಸಂಘದ ಸದಸ್ಯರಿಗೆ ಅದರ ಬಗ್ಗೆ ಅರಿವು ಮೂಡಿಸಲು ಪ್ರಯತ್ನಗಳನ್ನು ಮಾಡಬೇಕು.
- ಇ.ಎಲ್.ಸಿ.ಯ ಎಲ್ಲಾ ಚಟುವಟಿಕೆಗಳಿಗೆ ಸುಲಭವಾಗಿ ಎಲ್ಲರಿಗೂ ಲಭ್ಯವಾಗುವಂತಹ ಕಾಲೇಜಿನ ಕಟ್ಟಡದ ನೆಲಮಹಡಿಯ ಸ್ಥಳವಾಗಿರಬೇಕು.
- ಸಭೆಗೆ ಶ್ರವಣ ದೋಷವಿರುವ ವಿದ್ಯಾರ್ಥಿಯು ಹಾಜರಾಗಿದ್ದಲ್ಲಿ, ಅವರ ಸೌಲಭ್ಯಕ್ಕಾಗಿ ಸಂಜ್ಞೆ ಭಾಷೆಯ ಪರಿಣಿತ ವ್ಯಾಖ್ಯಾನಕಾರರು ಲಭ್ಯವಿರುವಂತೆ ನೋಡಿಕೊಳ್ಳುವುದು. (ವ್ಯಾಖ್ಯಾನಕಾರರು ವಿದ್ಯಾರ್ಥಿಯು ಈಗಾಗಲೇ ಹೊಂದಿರುವ ತನ್ನ ಸಹಪಾಠಿಯಾಗಿರಲೂ ಬಹುದು.)
- ಸಂಘದಿಂದ ನಿರ್ವಹಿಸುವ ಯಾವುದೇ ಚಟುವಟಿಕೆಯು ವಿದ್ಯಾರ್ಥಿಗಳ ವಿಕಲತೆಯಿಂದಾಗಿ ಹೊರಗಿಡತಕ್ಕದ್ದಲ್ಲ.
- ವಿಕಲಚೇತನ ವಿದ್ಯಾರ್ಥಿಗಳು ಸಂಘದಲ್ಲಿ ಸೊಗಸಾಗಿ ಪ್ರತಿನಿಧಿಸುವರು.

# 15. ಸೂಚನೆಗಳೊಂದಿಗೆ ಚಟುವಟಿಕೆಗಳು



## ಚಟುವಟಿಕೆ: ಪ್ರಜಾ ಪ್ರಭುತ್ವದ ಗೋಡೆ

ಗೋಡೆ ಪತ್ರಿಕೆಯ ಉದ್ದೇಶವೇನೆಂದರೆ ಚುನಾವಣಾ ಸಾಕ್ಷರತೆಗೆ ಸಂಬಂಧಿಸಿದ ಮಾಹಿತಿಯನ್ನು ಆಸಕ್ತಿದಾಯಕವಾಗಿ, ಕ್ರಿಯಾಶೀಲವಾಗಿ ಮತ್ತು ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ ರೀತಿಯಲ್ಲಿ ಪ್ರಚುರಪಡಿಸುವುದು, ಹಂಚಿಕೊಳ್ಳುವುದು ಮತ್ತು ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸುವಂತೆ ಪ್ರೇರೇಪಿಸುವುದಾಗಿದೆ.

ಈ ಉದ್ದೇಶಕ್ಕಾಗಿ ಶಾಲೆಯ ಮುಖ್ಯ ಭಾಗದಲ್ಲಿನ ಒಂದು **ಗೋಡೆಯನ್ನು** ಬಳಸಿಕೊಳ್ಳಲಾಗುತ್ತದೆ. ಇದನ್ನು **"ಪ್ರಜಾ ಪ್ರಭುತ್ವದ ಗೋಡೆ"** ಎಂದು ಕರೆಯಲಾಗುತ್ತದೆ. ಈ ಗೋಡೆಯ ಮೇಲೆ ಚುನಾವಣಾ ಸಾಕ್ಷರತೆಗೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಪ್ರದರ್ಶಿಸಲಾಗುತ್ತದೆ ಅಥವಾ ಕಾಲೇಜಿನ ಅನುಮತಿಯಿದ್ದಲ್ಲಿ ಇವುಗಳನ್ನು ಗೋಡೆಯ ಮೇಲೆ ಬರೆಸಲಾಗುತ್ತದೆ.

ಕಾಲೇಜು ಆಡಳಿತ ಮಂಡಳಿಯು ನಿಗದಿಪಡಿಸಿದ ಕಾಲೇಜು ಕಾರಿಡಾರ್(ಆವರಣ) ದಲ್ಲಿ ಗೋಡೆಯ ಜಾಗ ಅಥವಾ ಪ್ರದರ್ಶನಾ ಫಲಕವನ್ನು ಹಂಚಿಕೆ ಮಾಡಿಕೊಡಬೇಕು. ಗೋಡೆ ಪತ್ರಿಕೆಯ ವಿಷಯವನ್ನು ಪ್ರತಿ ತಿಂಗಳೂ ಬದಲಾಯಿಸುವುದು.

### ಪದ್ಧತಿ

1. ಕಾರ್ಯಕಾರಿ ಸಮಿತಿಯ ಮೂಲಕ ಮಾರ್ಗದರ್ಶನ ಪಡೆದ ಇ.ಎಲ್.ಸಿ.ಯು ಗೋಡೆ ಪತ್ರಿಕೆಯ ನಿರ್ವಹಣೆ ಮಾಡುತ್ತದೆ. ಸದಸ್ಯರ ತಂಡವೊಂದು ಗೋಡೆ ಪತ್ರಿಕೆಯ ನಿರ್ವಹಣೆಗೆ ಕೋರ್ ತಂಡವಾಗಿ ಕಾರ್ಯ ನಿರ್ವಹಿಸುವುದು.
2. ಗೋಡೆ ಪತ್ರಿಕೆಯು ಪ್ರತಿ ತಿಂಗಳು ಬದಲಾಗುತ್ತಿರುತ್ತದೆ.
3. ಗೋಡೆ ಪತ್ರಿಕೆಯು ಎಲ್ಲಾ ಸೆಮಿಸ್ಟರ್ ವಿದ್ಯಾರ್ಥಿಗಳಿಂದ ಪ್ರಸ್ತುತ ವಿಷಯದ ಮೇಲೆ ಲೇಖನಗಳು, ಪ್ರಬಂಧಗಳು, ಕವನಗಳು, ರೇಖಾ ಚಿತ್ರಗಳು, ಚಿತ್ರಕಲೆ, ಪತ್ರಗಳು, ಪದ ಆಟಗಳು ಇತ್ಯಾದಿಗಳಲ್ಲಿನ ಕೊಡುಗೆಗೆ ಆಹ್ವಾನಿಸುವುದು.
4. ವಿಷಯದಲ್ಲಿನ ಅಂಶಗಳು ವಾರಕ್ಕೊಮ್ಮೆ ಅಥವಾ ಹದಿನೈದು ದಿನಗಳಿಗೊಮ್ಮೆ ವಿದ್ಯಾರ್ಥಿಗಳಿಂದ ಕೊಡುಗೆಯ ಪ್ರಮಾಣವನ್ನು ಆಧರಿಸಿ ಬದಲಾಗತಕ್ಕದ್ದು.
5. ಗೋಡೆ ಪತ್ರಿಕೆಗಳು ಈ ತಿಂಗಳಲ್ಲಿ ನಿರ್ವಹಿಸಲಾಗುತ್ತಿರುವ ಪ್ರಮುಖ ಇ.ಎಲ್.ಸಿ. ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪ್ರಮುಖವಾದ ಜಾಹಿರಾತು ಪ್ರಕಟಣೆಗಳನ್ನು ಸಹ ಪ್ರದರ್ಶಿಸುವುದು.
6. ಗೋಡೆಯು ನಾಲ್ಕು ಪ್ರಮುಖ ವಿಭಾಗಗಳಾಗಿ ವಿಭಜಿಸಲ್ಪಡುವುದು.

| ವಿಭಾಗ 1 | ವಿಭಾಗ 2 |
|---|---|
| ಇದು ಚುನಾವಣೆಗೆ ಸಂಬಂಧಿಸಿದ ಪಾರಿಭಾಷಿಕ ಪದಗಳು ಮತ್ತು ಮೂಲ ಅಂಶಗಳು ಅಥವಾ ವಿಷಯಕ್ಕೆ ಸಂಬಂಧಿಸಿದ ಗಾದೆಯನ್ನು ಒಳಗೊಂಡಿರುತ್ತದೆ. ಗಾದೆಯು 2–3 ಸರಳ ಆದರೆ ಸಾರಾಂಶಕ್ಕೆ ಸಂಬಂಧಿಸಿದ ಪ್ರಮುಖ ಮಾಹಿತಿ / ಅಂಶಗಳನ್ನು ಒಳಗೊಂಡಿರಬೇಕು. | ಇದು ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ನೀಡಿರುವ ಕೊಡುಗೆಯನ್ನು ಒಳಗೊಂಡಿರುತ್ತದೆ. ವಿಷಯವು ಚುನಾವಣೆಗೆ ಸಂಬಂಧಿಸಿದ ವಿವಿಧ ಪ್ರಕ್ರಿಯೆಗಳಿಗೆ ಸಂಬಂಧಪಟ್ಟಿರಬಹುದು. ಕಥೆಗಳನ್ನು ವಿದ್ಯಾರ್ಥಿಗಳೇ ರಚಿಸಿ ದೃಷ್ಟಾಂತಗಳ ರೂಪದಲ್ಲಿ ವ್ಯಕ್ತಪಡಿಸಿರಬೇಕು.<br>ಪರ್ಯಾಯವಾಗಿ, ಈ ವಿಭಾಗದಲ್ಲಿ "ಮತದಾನದಲ್ಲಿನ ನಂಬಿಕೆ" (Belief in the Ballot) ಪುಸ್ತಕಲ್ಲಿ ಚುನಾವಣಾ ರೂಪಕಗಳಿಗೆ ಸಂಬಂಧಿಸಿದಂತೆ ಆಯ್ದುಕೊಂಡಿರುವ ವಿಷಯಗಳನ್ನೂ ಪ್ರಕಟಪಡಿಸಬಹುದು. |
| **ವಿಭಾಗ 3** | **ವಿಭಾಗ 4** |
| ಈ ವಿಭಾಗವು, 'ನೀವೂ ಒಬ್ಬ ಮತದಾರರೆ?', ಇಲ್ಲದಿದ್ದಲ್ಲಿ ಮತದಾರ ರಾಗಲು ಏನು ಮಾಡಬೇಕು? ಇತ್ಯಾದಿ ಪ್ರಶ್ನೆಗಳಿಗೆ ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆಗಳನ್ನು ಆಹ್ವಾನಿಸುತ್ತದೆ. ಇವುಗಳಿಗೆ ವಿದ್ಯಾರ್ಥಿಗಳು ಉತ್ತರಿಸಲು ಸ್ಥಳಾವಕಾಶವನ್ನು ಒದಗಿಸಬೇಕಾಗುತ್ತದೆ. | ಈ ವಿಭಾಗವು ಇಎಲ್‌ಸಿಯಿಂದ ನಡೆಸುವ ಪ್ರಮುಖ ಚಟುವಟಿಕೆಗಳ ವಿವರಗಳು ಮತ್ತು ಘೋಷಣೆಗಳನ್ನು ಒಳಗೊಂಡಿರುತ್ತದೆ.<br>ಈ ವಿಭಾಗದಲ್ಲಿ ಇದಲ್ಲದೆ, ವೀಕ್ಷಕರು ಪ್ರಶ್ನೆಗಳನ್ನು ಕೇಳಲು ಸ್ವಲ್ಪ ಸ್ಥಳಾವಕಾಶವನ್ನೂ ಈ ವಿಭಾಗದಲ್ಲಿ ಮೀಸಲಿರಿಸಬೇಕಾಗುತ್ತದೆ.<br>**ಜಿಲ್ಲಾ ಸಂಪರ್ಕ ಕೇಂದ್ರದ (ಚುನಾವಣೆ) ದೂರವಾಣಿ ಸಂಖ್ಯೆಯನ್ನು ಪ್ರಧಾನವಾಗಿ ಪ್ರದರ್ಶಿಸುವುದು.** |

## ಕಾಲರೇಖೆ

ಗೋಡೆ ಪತ್ರಿಕೆಯು ಹೊಸ ವಿಷಯದೊಂದಿಗೆ ಪ್ರತಿ ತಿಂಗಳ ಮೊದಲ ವಾರದೊಳಗೆ ಅಪ್‌ಡೇಟ್ ಮಾಡಲಾಗುವುದು. ಗೋಡೆ ಪತ್ರಿಕೆಯ ವಿಷಯಾಂಶಗಳು ವಿದ್ಯಾರ್ಥಿಗಳಿಂದ ನೀಡಲಾದ ಕೊಡುಗೆ ಪ್ರಮಾಣದ ಆಧಾರದನ್ವಯ ದಿನವಹಿ/ ವಾರದಲ್ಲಿ ಬದಲಾವಣೆಯಾಗಬಹುದು.


## ಗೋಡೆ ಪತ್ರಿಕೆಗೆ ಸೂಚಿಸಲಾದ ಹೊಸ ವಿಷಯಗಳು

ಗೋಡೆ ಪತ್ರಿಕೆಯ ವಿಷಯಗಳು ಈ ಕೆಳಗಿನವು ಗೋಡೆ ಪತ್ರಿಕೆಯ ಸಾರಾಂಶದ ಪಟ್ಟಿಯಾಗಿದೆ–

1. ಪ್ರಜಾಪ್ರಭುತ್ವ: ಜನರಿಂದ, ಜನರಿಗಾಗಿ ಜನರೇ ರಚಿಸಲಾದ ಸರ್ಕಾರ.
2. ನನ್ನ ಮತ ನನ್ನ ಹಕ್ಕು/ಮತದ ಮೌಲ್ಯ.
3. ಒಳಗೊಳ್ಳುವ ಚುನಾವಣೆಗಳು: ಪ್ರತಿಯೊದು ಮತವೂ ಪರಿಗಣಿಸಲ್ಪಡುತ್ತದೆ.
4. ನೈತಿಕ ಮತ್ತು ಸೂಚಿತವಾದ ಮತದಾನ.
5. ಮಾದರಿ ನೀತಿ ಸಂಹಿತೆ.
6. ಮತದಾನದ ಗೌಪ್ಯತೆ.
7. ಇ.ವಿ.ಎಂ. ಮತ್ತು ವಿ.ವಿ.ಪ್ಯಾಟ್‌ಗಳನ್ನು ಬಳಸುವ ಮೂಲಕ ಚುನಾವಣಾ ಪ್ರಕ್ರಿಯೆಯ ದೃಢತೆ.
8. ನಿಮ್ಮ ಅಭ್ಯರ್ಥಿಗಳನ್ನು ತಿಳಿಯುವುದು.
9. ರಾಷ್ಟ್ರೀಯ ಮತದಾನದ ದಿನ.
10. ಚುನಾವಣಾ ಪ್ರಣಾಳಿಕೆಗಳು.
11. ಪ್ರವೇಶ ಮತ್ತು ಅಭಿಪ್ರಾಯ ಮತದಾನ.
12. ಸಾಮಾಜಿಕ ಮಾಧ್ಯಮ ಮತ್ತು ರಾಜಕೀಯ ಆಂದೋಲನ.

## ಚಟುವಟಿಕೆ: ಮತ ಪತ್ರ ಸಮಾಲೋಚನೆ (Ballot Bistro)

ಕಾಫಿ ಹೌಸ್ ಚರ್ಚೆಯ ಹಿನ್ನೋಟ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸುವುದು, ಮತಪತ್ರ ಬಿಸ್ಟ್ರೊ/ ಚರ್ಚೆಯು ಅಗತ್ಯವಾಗಿ ಚರ್ಚೆಯನ್ನು ಒಳಗೊಂಡಿರುವುದೇ ಮತ್ತು ಕಾಲೇಜು ಕ್ಯಾಂಟೀನ್ ಮತ್ತು ಕೆಫೆಗಳಲ್ಲಿ ಮುಕ್ತ ಚರ್ಚೆಯು ಅಧೀವೇಶನಗಳು ಚುನಾವಣಾ ವಿಧಾನದಲ್ಲಿ ಯಾವತರ ಒಳಗೊಳ್ಳುವಿಕೆ, ತೊಡಗಿಸಿಕೊಳ್ಳುವಿಕೆ ಮತ್ತು ಭಾಗವಹಿಸುವಿಕೆಗೆ ಸಂಬಂಧಿದ ವಿಷಯಗಳ ಮೇಲೆ ಇಎಲ್‌ಸಿ ಸದಸ್ಯರಿಂದ ನಿರ್ಣಯಿಸುವುದು.



**ಭಾಗವಹಿಸುವವರು:** ಎಲ್ಲಾ ಇ.ಎಲ್.ಸಿ.ಯ ಸದಸ್ಯರಿಗಾಗಿ ಮತಪತ್ರ ಚರ್ಚೆಗಳ/ಬಿಸ್ಟ್ರೊ ಕಡ್ಡಾಯ ಚಟುವಟಿಕೆಯಾಗಿದೆ. ಇ.ಎಲ್.ಸಿ.ಯ ಸದಸ್ಯರಲ್ಲದವರಿಗೂ ಸಹಾ ಬಿಸ್ಟ್ರೊ ಅವಧಿಗಳಿಗೆ ಸೇರ್ಪಡೆಯಾಗಲು ಮುಕ್ತರಾಗಿರುವರು.

**ವಿಧಾನ:** ಆ ದಿನದ ಗೊತ್ತುವಳಿಯು ನಿರ್ಣಯವಾದ ಬಳಿಕ ಸದನವು ಹಾಜರಿರುವ ಎಲ್ಲರೂ ವಿಷಯದ ಮೇಲೆ ಅವನ/ಅವಳ ಅಭಿಪ್ರಾಯಗಳು, ನಿಲುವುಗಳು ಮತ್ತು ದೃಷ್ಟಿ ಕೋನಗಳನ್ನು ಅಂಗೀಕರಿಸುವುದು, ಅಗತ್ಯತೆಯಲ್ಲಿ ಔಪಚಾರಿಕವಲ್ಲದ್ದು ಇದ್ದಾಗ್ಯೂ ಮತಪತ್ರ ಚರ್ಚೆಯು ಭಾಗವಹಿಸುವಿಕೆಯು, ಆ ಘಟನೆಗೆ ಸಂಬಂಧಿಸಿದಂತೆ ಸಕ್ರಿಯವಾಗಿ ಕೊಡುಗೆ ನೀಡಲು ಮತ್ತು ತೊಡಗುವುದನ್ನು ನಿರೀಕ್ಷಿಸುತ್ತದೆ. ಇಎಲ್‌ಸಿಯ ಅದೀವೇಶನವು ಇಂಗ್ಲಿಷ್ ಮತ್ತು

ಸಂಬಂಧಿಸಿದ ಪ್ರಾಂತೀಯ ಭಾಷೆಯ ಮಿಶ್ರಣದಲ್ಲಿ ನಿರ್ವಹಿಸಲಾಗಿರುವುದನ್ನು ಖಚಿತಗೊಳಿಸಬೇಕು ಇದು ಒಂದು ನೈಜ ಚಟುವಟಿಕೆಯಾಗಿದ್ದು ಇ.ಎಲ್.ಸಿ.ಯ ಸದಸ್ಯರು ದಾಖಲಿಸಲು ಅಥವಾ ಈ ಘಟನೆಯ/ಚಟುವಟಿಕೆಯು ಹೆಚ್ಚು ಜನರನ್ನು ತಲುಪುವುದನ್ನು ಖಾತರಿಪಡಿಸಿಕೊಳ್ಳುವುದಕ್ಕೆ ಸಾಮಾಜಿಕ ಮಾಧ್ಯಮ ಚಾನಲ್‌ಗಳಲ್ಲಿ ಲೈವ್ ಕಾರ್ಯಕ್ರಮವಾಗಿ ಬಿತ್ತರಿಸಲು ಮುಕ್ತರಾಗಿರುವರು.

**ಅವಧಿಗಳು:** 2 ಗಂಟೆಗಳು

**ಸಾಧ್ಯವಿರುವ ವಿಷಯಗಳು:** ಇ.ಎಲ್.ಸಿ. ಸದಸ್ಯರು ಮತಪತ್ರ ಬಿಸ್ಟ್ರೊ ಚರ್ಚೆಗೆ ತಮ್ಮದೇ ಆದ ವಿಷಯಗಳೊಡನೆ ಬರಬಹುದು ಅಥವಾ ಕೆಳಕಂಡ ಪಟ್ಟಿಯನ್ನು ಪರಾಮರ್ಶಿಸಬಹುದು.

- ಮತದಾರ ಶಿಕ್ಷಣ: ಅವಶ್ಯಕತೆ
- ಮತದಾನವನ್ನು ರಾಜ್ಯಗಳ ಮೂಲಕ ಕಡ್ಡಾಯ ಮಾಡಬೇಕು.
- ಭಾರತ ಮತದಾನ ಮಾಡಲು ಏನು ಮಾಡಬೇಕು?
- ಚುನಾವಣೆಗಳಲ್ಲಿ ಒಳಗೊಳ್ಳುವಿಕೆ.
- ಆನ್‌ಲೈನ್ ಮತದಾನ: ಮುಂದಿನ ಮಾರ್ಗ ಅಥವಾ ಸಮರ್ಥ ಸರ್ವಸಂಕಷ್ಟಗಳ ಪೆಟ್ಟಿಗೆಯನ್ನು (Pondoris Box) ತೆರೆಯುವುದು.
- ಗಂಭೀರವಾದ ಅಪರಾಧಗಳ ಆರೋಪವಿರುವ ಅಭ್ಯರ್ಥಿಗಳು ಚುನಾವಣೆಗಳಲ್ಲಿ ಸ್ಪರ್ಧಿಸುವುದರಿಂದ ಅನರ್ಹಗೊಳಿಸಬೇಕೆ?
- ಅಭಿಪ್ರಾಯ ಮತ್ತು ಮತದಾನ ಜನಾಭಿಪ್ರಾಯ ಸಂಗ್ರಹಣೆಗಳನ್ನು ನಿಷೇಧಿಸಬೇಕು ಮತ್ತು ನಿಯಂತ್ರಿಸಬೇಕು.
- ಇವಿಎಂ/ವಿ.ವಿ.ಪ್ಯಾಟ್‌ಜಾಗೃತಿ
- ನಿಮಗೆ ಇಷ್ಟವಿಲ್ಲದಿರುವುದನ್ನು ತಿಳಿಯುವುದು ನೋಟಾ (None Of The Above)



**ಚಟುವಟಿಕೆ: ಯುವ ಮತದಾರರ ಹಬ್ಬ ಅಥವಾ ಯುವ ಮತದಾತ ಮಹೋತ್ಸವ.**

ಸೆಮಿಸ್ಟರ್‌ನಲ್ಲಿ ಇ.ಎಲ್.ಸಿ. ಸದಸ್ಯರಿಂದ ಏರ್ಪಾಡು ಮಾಡುವ 1–2 ದಿನಗಳ ಹಬ್ಬದ ಕಾರ್ಯಕ್ರಮವಾಗಿರುವುದು. ವಿದ್ಯಾರ್ಥಿಗಳು ಈ ಕಾರ್ಯಕ್ರಮವನ್ನು ಎಲ್ಲಾ ನಗರಗಳ ಕಾಲೇಜಿನಲ್ಲಿ ಅಥವಾ ಅವರ ಸ್ವಂತ ಕಾಲೇಜು ವಿದ್ಯಾರ್ಥಿಗಳಿಗಾಗಿ ಮಾತ್ರವೇ ವ್ಯವಸ್ಥೆಗೊಳಿಸಲು ಆಯ್ಕೆ ಮಾಡುವ ಆಯ್ಕೆ ಹೊಂದಿರುವರು ಈ ಮಹೋತ್ಸವವು ಎಲ್ಲಾ ಕಾಲೇಜು ಸೊಸೈಟಿಗಳ ಸದಸ್ಯರನ್ನು ಕಾರ್ಯಕ್ರಮಗಳ ವ್ಯೂಹ ವ್ಯವಸ್ಥೆಗೆ ಒಟ್ಟಾಗಿ ತರಬಹುದು. ಕೆಲವು ಕಾರ್ಯಕ್ರಮಗಳ ಸಲಹೆಗಳೆಂದರೆ;

**ಚಿತ್ರಕಲೆ ಸ್ಪರ್ಧೆಗಳು:** ಗೋಡೆ ಚಿತ್ರ ಬರಹ, ಭಿತ್ತಿಪತ್ರಗಳು (ಪೋಸ್ಟರ್ಸ್), ಮರದ ಕುಶಲ ಕಲೆ/ ಶಿಲಾ ಮುದ್ರಣ ಸ್ಪರ್ಧೆಗಳು, ಕಾಲೇಜು/ ವಿಶ್ವವಿದ್ಯಾನಿಲಯ ಇಎಲ್‌ಸಿಗಳು, ಚುನಾವಣೆಗಳ ವಿಚಾರಗಳು, ಚುನಾವಣೆ ಪ್ರಕ್ರಿಯೆಗಳು, ಮತದಾನ, ಪ್ರಜಾಪ್ರಭುತ್ವ



ಮತ್ತು ವಿಶೇಷವಾಗಿ ರಾಜಕೀಯಕ್ಕೆ ಸಂಬಂಧಿಸಿದಂತೆ ಯುವಕರನ್ನು ಜಾಗೃತಗೊಳಿಸಲು ಮತ್ತು ಅರಿವು ಮೂಡಿಸಲು ಅಂತರ ಕ್ರಿಯೆ ಮಾಧ್ಯಮವಾಗಿ ಕಾಲೇಜು ಒಳಗೆ ಅಥವಾ ಅಂತರ ಕಾಲೇಜುಗಳ ಕಲಾ ಸ್ಪರ್ಧೆಗಳನ್ನು ಉತ್ತೇಜನಗೊಳಿಸುವುದು.

**ಮೂಕಾಭಿನಯ / ಬೀದಿನಾಟಕಗಳು/ ರಸ್ತೆ ಪ್ರದರ್ಶನಗಳು/ ಬೀದಿಬದಿ ಪ್ರದರ್ಶನಗಳು:** ಕಾಲೇಜು/ವಿಶ್ವವಿದ್ಯಾನಿಲಯಗಳ ನಾಟಕ ಸಮಿತಿಗಳ ಸಹಯೋಗದೊಂದಿಗೆ ವ್ಯವಸ್ಥೆಗೊಳಿಸುವುದು ಮತ್ತು ಮೂಡ್ ಇಂಡಿಗೋ, ಅಂತರಾಗ್ನಿ, ಓಯಸಿಸ್, ಮಲ್ಹಾರ್, ರೆಂಡೆಜೋವಸ್ ಇತ್ಯಾದಿಗಳಂತಹ ಪ್ರಮುಖ ಯುವ ಉತ್ಸವಗಳಲ್ಲಿ ಪ್ರದರ್ಶಿತವಾಗುವುದು.

**ಛಾಯಾಚಿತ್ರ ಸ್ಪರ್ಧೆಗಳು, ಚಿತ್ರ ಪ್ರದರ್ಶನಗಳು ಮತ್ತು ಕಿರುಚಿತ್ರ ನಿರ್ಮಾಣ ಸ್ಪರ್ಧೆ:** ಕಾಲೇಜು/ ವಿಶ್ವವಿದ್ಯಾನಿಲಯಗಳ ಛಾಯಾಚಿತ್ರ ಸಮಿತಿ ಮತ್ತು ಚಲನಚಿತ್ರ ಸಮಿತಿಗಳ ಸಹಯೋಗದೊಂದಿಗೆ ನಿರ್ವಹಿಸಲಾದ ಚಿತ್ರಗಳು, ಸಾಕ್ಷ್ಯ ಚಿತ್ರಗಳು ಮತ್ತು ಸ್ಥಿರ ಚಿತ್ರಗಳು, ವಿವಿಧ ಸಂದೇಶಗಳನ್ನು ಸಾರುತ್ತವೆ ಮತ್ತು ಜಾಗೃತಿ ಮೂಡಿಸಲು ಸಹಕರಿಸುತ್ತವೆ ಇವು ಚುನಾವಣಾ ಪ್ರಕ್ರಿಯೆಗಳು, ಚುನಾವಣೆಗಳು, ಪ್ರಜಾಪ್ರಭುತ್ವಗಳು, ಪ್ರಜೆಗಳ ಹಕ್ಕು ಮತ್ತು ಕರ್ತವ್ಯಗಳಂತಹ ವಿಷಯಗಳನ್ನು ಪರಿಗಣಿಸುವಲ್ಲಿ ವರ್ತನೆಯ ಬದಲಾವಣೆಯಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿದಲ್ಲಿ ಪ್ರೇರಣಾ ಸಾಧನಗಳಾಗಿ ನಿರ್ವಹಿಸಲ್ಪಡುತ್ತವೆ.



ಇ.ಎಲ್.ಸಿ. ಮಂಡಳಿಯಿಂದ ಕಿರುಚಿತ್ರ ನಿರ್ಮಾಣ ಸ್ಪರ್ಧೆ ಮತ್ತು ಛಾಯಾಚಿತ್ರ ಸ್ಪರ್ಧೆಯ ವಿಷಯ/ ಅಂಶಗಳನ್ನು ಕಾಲೇಜು/ ವಿಶ್ವವಿದ್ಯಾನಿಲಯಗಳ ಸಾಮಾನ್ಯ ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆಗಾಗಿ ಮುಂಚಿತವಾಗಿಯೇ ಘೋಷಿಸುವುದು. ಇದೇ ರೀತಿಯಲ್ಲಿ, ಷೋಕೇಸ್ ಮಾಡಲಾದ ಚಲನಚಿತ್ರಗಳ ಪಟ್ಟಿಯಲ್ಲಿ ಸಂಸ್ಥೆಯ ವಿದ್ಯಾರ್ಥಿ ಸಮೂಹದಿಂದ ಶಿಫಾರಸ್ಸುಗಳ ಮೇಲೆ ಆಧಾರಿತ ಸಂಪನ್ಮೂಲವಾಗುವುದು. ಇಎಲ್‌ಸಿ ಮೂಲಕ ಅನುಪಾಲನಾ ಅಧ್ಯಯನ ಮತ್ತು ವಿಶ್ಲೇಷಣೆ ಅವಧಿ, ಪ್ರದರ್ಶನೋತ್ತರ ಪರಾಮರ್ಶೆಯನ್ನು ಕೈಗೊಳ್ಳಬಹುದು.

**ನಾಟ್ಯ/ ಸಂಗೀತ ಸ್ಪರ್ಧೆಗಳು:** ಕಾಲೇಜುಗಳ ನಾಟ್ಯ ಮತ್ತು ಸಂಗೀತ ಸಂಘಗಳ ಸಹಯೋಗದೊಂದಿಗೆ ಅನುಕ್ರಮವಾಗಿ ಕೈಗೊಳ್ಳಲಾದ ಕಾರ್ಯಕ್ರಮಗಳು ನೃತ್ಯರೂಪಕಗಳು ಮತ್ತು ವಾದ್ಯಗೋಷ್ಠಿಗಳ ಮೂಲಕ ಕಥಾ ಸಾಹಿತ್ಯ ಹೇಳುವಂತಹ ಹಾಡುಗಳು, ಯುವಕರು ಮತದಾನ ಮಾಡಲು ಪ್ರೇರೇಪಿಸಬಹುದಾಗಿದ್ದು, ಭಾಗವಹಿಸಲು ಆಹ್ವಾನಿಸಬಹುದು.

ಪರ್ಯಾಯವಾಗಿ, ಇ.ಎಲ್.ಸಿ. ಸದಸ್ಯರು ಮೇಲ್ಕಂಡ ಚಟುವಟಿಕೆಗಳನ್ನು ವೈಯಕ್ತಿಕವಾಗಿ ಆಯ್ದು ಕೊಳ್ಳಬಹುದಾಗಿದ್ದು, ಶೈಕ್ಷಣಿಕ ವರ್ಷದ ಅವಧಿಯಲ್ಲಿ ಯಾವುದೇ ಸಮಯದಲ್ಲಿ ಅವುಗಳನ್ನು ಪ್ರತ್ಯೇಕವಾಗಿ ಸ್ಪರ್ಧೆಗಳಾಗಿ ವ್ಯವಸ್ಥೆಗೊಳಿಸಬಹುದು.

**ನಿಂದನೆ ಮತ್ತು ಟೀಕೆಯ ಪದ್ಯಗಳು :** ಕಾಲೇಜು/ ವಿಶ್ವವಿದ್ಯಾನಿಲಯಗಳ ಸಾಕ್ಷರತಾ ಸಮಿತಿ ಅಥವಾ ಸಂಗೀತ ಸಮಿತಿಯ ಸಹಕಾರದೊಂದಿಗೆ ನಿರ್ವಹಿಸುವುದು. ಕಾಲೇಜು ಒಳಗಿನ/ ಅಂತರ ಕಾಲೇಜು ನಿಂದನಾ ಸಮರ ಮತ್ತು ಪದ್ಯ ಖಂಡನಾ ಸ್ಪರ್ಧೆಗಳನ್ನು ಯುವಕರಲ್ಲಿ ಪ್ರಚಾರ ಸಾಧನಗಳಾಗಿ ಪರಿಗಣಿಸಲಾಗಿರುತ್ತದೆ. ಇದರ ಮುಂದುವರೆದ ಭಾಗವಾಗಿ, ಪಾತಿನಿಧ್ಯಕ್ಕೆ ಸಂಬಂಧಿಸಿದ ವಿಷಯ ವಸ್ತು, ಬದಲಾದ ಏಜೆಂಟ್ಸ್‌ಆಗಿ ಯುವಕರು, ಪ್ರಜಾಪ್ರಭುತ್ವ, ಚುನಾವಣೆಗಳು, ರಾಜಕೀಯ, ಮತದಾರತ್ವ, ಮತದಾನದ ಹಕ್ಕು ಇತ್ಯಾದಿಗಳನ್ನು ಸಾಮಾಜಿಕ ಮಾಧ್ಯಮದ ಮೂಲಕ ಒತ್ತು ನೀಡುವುದು ಅಗತ್ಯವಾಗಿದೆ. ಇ.ಎಲ್.ಸಿ.ಗಳು ಇಂತಹ ಸ್ಪರ್ಧೆಗಳನ್ನು ವಿದ್ಯಾರ್ಥಿ ಜನಸಂಖ್ಯೆಯೊಂದಿಗೆ ತೊಡಗಲು ಮತ್ತು ಸಂಭಾಷಣೆಯ ನಿರ್ಮಾಣಕ್ಕಾಗಿ ನಿಯಮಿತವಾಗಿ ನಡೆಸಬಹುದು. ಆನ್‌ಲೈನ್‌ನಲ್ಲಿ ಕೈಗೊಳ್ಳುತ್ತಿರುವುದರಿಂದಾಗಿ, ವಿಜೇತರನ್ನು ನಿರ್ಧರಿಸಲು ವಿಶೇಷ ತೀರ್ಪುಗಾರರೊಬ್ಬರನ್ನು ಆಹ್ವಾನಿಸಬಹುದು ಅಥವಾ ಸಾರ್ವಜನಿಕ ಮತ ಪದ್ಧತಿಯನ್ನು ವಿಜೇತರನ್ನು ತೀರ್ಮಾನಿಸಲು ಸಾಧನವನ್ನಾಗಿಸಬಹುದು.


**ಚುನಾವಣೆ ಕ್ವಿಜ್:** ಚುನಾವಣೆ ಮತ್ತು ಚುನಾವಣಾ ಪ್ರಕ್ರಿಯೆಯ ಮೇಲೆ ಕ್ವಿಜ್‌ಅನ್ನು ಇಎಲ್‌ಸಿಯು ಕಾಲೇಜಿನ ಕ್ವಿಜ್ ಸಮಿತಿಯ ಸಹಯೋಗದೊಂದಿಗೆ ವಿದ್ಯಾರ್ಥಿಗಳ ನಡುವೆ ಏರ್ಪಡಿಸಬಹುದು.

**ಮತದಾರರ ಸಂಕಲ್ಪ:** ಎಲ್ಲಿ ಯಾವ ಕಾರ್ಯಕ್ರಮ/ಚಟುವಟಿಕೆಗಳಲ್ಲಿ ಭಾಗವಹಿಸುವರ ಮತ್ತು ಇವರಿಂದ ಮತದಾರರ ಸಂಕಲ್ಪವನ್ನು ಪಡೆಯುವುದು ಕಡ್ಡಾಯ ಚುನಾವಣೆಯಾಗುವುದು ಸಂಕಲ್ಪವನ್ನು ಇ.ಎಲ್.ಸಿ.ಯು ಸಾಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ಸಹಾ ಪ್ರಚಾರಗೊಳಿಸುವುದು.

## ಚಟುವಟಿಕೆ: ವಿಶೇಷ ಆಂದೋಲನ

ಭಾರತೀಯ ಪ್ರಜೆಯಾಗಿದ್ದು 18 ವರ್ಷ ತುಂಬಿರುವ ಎಲ್ಲ ಕಾಲೇಜು ವಿದ್ಯಾರ್ಥಿಗಳೂ ಸಹ ಮತವನ್ನು ಚಲಾಯಿಸಲು ಅರ್ಹರಾಗಿರುವರು. ಇದರಿಂದಾಗಿ ಅವರೆಲ್ಲರೂ ಮತದಾರರಾಗಿ ನೋಂದಣಿ ಮಾಡುವುದು ಪ್ರಮುಖವಾದುದು. ಇಎಲ್‌ಸಿ ಸದಸ್ಯರು ಅವರ ಸಹಪಾಠಿಗಳನ್ನು ನೋಂದಣಿ ಮಾಡುವಂತೆ ಪ್ರೇರೇಪಿಸುವಂತಹ ಜವಾಬ್ದಾರಿಯನ್ನು ಹೊಂದಿರುವುದು ಮತ್ತು ಇದಕ್ಕಾಗಿ ಅವರು ಒಂದು ವಿಶೇಷ ನೋಂದಣಿ ಆಂದೋಲನವನ್ನು ನಡೆಸುವರು.

### ವಿಧಾನ:




- ಇ.ಎಲ್.ಸಿ. ಸದಸ್ಯರು ವಿಶೇಷ ಆಂದೋಲನ ಉದ್ದೇಶದ ಬಗ್ಗೆ ಮಾತನಾಡುತ್ತಾ ಕಾಲೇಜಿನಲ್ಲಿ ಉತ್ತೇಜನ ಮಾಡುವರು.
- ಅವರು ಹೇಗೆ ನೋಂದಣಿ ಮಾಡಿಸಬೇಕು (ನಮೂನೆ-6ನ್ನು ಭರ್ತಿ ಮಾಡುವ ಮೂಲಕ) ಎಂಬುದರ ಬಗ್ಗೆ ಒಂದು ಅಧಿವೇಶನ ಹೊಂದಿರುತ್ತಾರೆ ಮತ್ತು ಅಗತ್ಯವಿರುವ ವಿವಿಧ ದಾಖಲೆಗಳ ಬಗ್ಗೆ ಮಾತನಾಡುವರು.
- ಇ.ಎಲ್.ಸಿ. ಸದಸ್ಯರು ತಮ್ಮ ಕ್ಷೇತ್ರದ ಬಿಎಲ್‌ಓ ಸಂಪರ್ಕಿಸುವರು ಮತ್ತು ಕಾಲೇಜು ವಿದ್ಯಾರ್ಥಿಗಳೊಂದಿಗಿನ ವಿಶೇಷ ಅಧಿವೇಶನಕ್ಕಾಗಿ ಅವನು/ಅವಳನ್ನು ಆಹ್ವಾನಿಸುವರು.
- ಆಯ್ದ ದಿನದಂದು, ಅವರು ನಮೂನೆ-6ನ್ನು ವಿತರಿಸುವ ಬೂತ್‌ಅನ್ನು ಸಿದ್ಧಪಡಿಸುವರು ಮತ್ತು ವಿದ್ಯಾರ್ಥಿಗಳಿಗೆ ಅವರ ಅರ್ಜಿಗಳನ್ನು ಭರ್ತಿಮಾಡಲು ಹಾಗೂ ಬಿಎಲ್‌ಓಗೆ ಸಲ್ಲಿಸಲು ಅವಕಾಶವನ್ನು ನೀಡುವರು.
- ಬೇರೆ ನಗರ ಮತ್ತು ರಾಜ್ಯಗಳಿಗೆ ಸೇರಿದ ವಿದ್ಯಾರ್ಥಿಗಳಿಗಾಗಿ ಅವರು ರಾಷ್ಟ್ರೀಯ ಮತದಾರ ಸೇವಾ ಪೋರ್ಟಲ್ www.nvsp.in / www.ceokarnataka.kar.nic.in ಬಗ್ಗೆ ತಿಳಿದುಕೊಳ್ಳಬಹುದು ಮತ್ತು ಅವರನ್ನು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಲು ಕೋರಬಹುದು.

**ಅವಧಿ:** ಅರ್ಧದಿನ.

**ಕಾಲಮಿತಿ:** ಈ ಚುನಾವಣೆಯು ಸಂಬಂಧಿಸಿದ ರಾಜ್ಯದ ಬೇಸಿಗೆ ಪುನರಾವರ್ತನಾ ಅವಧಿಯ ಸಮಯದಲ್ಲಿ ನಿರ್ವಹಿಸುವುದು.


**ಚಟುವಟಿಕೆ: ಚರ್ಚಾಸ್ಪರ್ಧೆ / ಆಶುಭಾಷಣ ಸ್ಪರ್ಧೆ**

ಚರ್ಚಾಸ್ಪರ್ದೆಗಳು ಮತ್ತು ಚರ್ಚೆಗಳು ಯುವಕರಲ್ಲಿ ಸಂಭಾಷಣೆಗೆ ಒಂದು ಉತ್ತಮ ಮಾರ್ಗವಾಗಿದೆ, ಇ.ಎಲ್.ಸಿ. ಸದಸ್ಯರು ಬ್ಯಾಲೆಟ್ ಬಿಸ್ಕ್ರೋಸ್ ಮೂಲಕ ಚುನಾವಣಾ ಪ್ರಕ್ರಿಯೆ ಮತ್ತು ಮತದಾರ ಜಾಗೃತಿಗೆ ಸಂಬಂಧಿಸಿದ ವಿಷಯದ ಮೇಲೆ ಈಗಾಗಲೇ ಸಾಕಷ್ಟು ಜ್ಞಾನದ ಕಣಜವನ್ನು ಭಿತ್ತಿದ್ದಾರೆ. ಇದರಿಂದ ಹೀಗೆ ಅಂತರ್ ಕಾಲೇಜು ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವ ಮೂಲಕ ಅವರು ಇನ್ನೂ ಮುಂದುವರಿದ ಸಂಭಾಷಣೆಯನ್ನು ಕೈಗೊಳ್ಳುವರು.

**ವಿಧಾನ:**

- ಇ.ಎಲ್.ಸಿ. ಸದಸ್ಯರು ಕಾರ್ಯಕಾರಿ ಸಮಿತಿಯೊಂದಿಗೆ ಸ್ಪರ್ಧೆಯ ನಮೂನೆಯ ವಿಧದ ಮೇಲೆ ನಿರ್ಧರಿಸುವರು. ಇದು ಸಂಸದೀಯ ಚರ್ಚೆ, ಸಾಮಾನ್ಯ ಚರ್ಚೆ, ಪ್ಯಾನೆಲ್ ಚರ್ಚೆ ಅಥವಾ ಆಶುಭಾಷಣ ಸ್ಪರ್ಧೆಯಾಗಿರಬಹುದು.
- ಇ.ಎಲ್.ಸಿ. ಸದಸ್ಯರಿಂದ ಕಾರ್ಯಕಾರಿ ಸಮಿತಿಯ ಸದಸ್ಯರ ಅನುಮೋದನೆಯೊಂದಿಗೆ ಇತರೆ ವಿಷಯಗಳನ್ನು ನಿರ್ಧರಿಸತಕ್ಕದ್ದು. ನೀವು ವಿಷಯಗಳಿಗಾಗಿ ಬ್ಯಾಲೆಟ್ ಬಿಸ್ಕ್ರೋ ಚಟುವಟಿಕೆಯಲ್ಲಿ ಸೂಚಿತವಾದ ವಿಷಯಗಳ ಪಟ್ಟಿಯನ್ನು ಅವಲೋಕಿಸುವುದು.
- ಎಲ್ಲಾ ನಗರ ಕಾಲೇಜುಗಳನ್ನು ಭಾಗವಹಿಸಲು ಆಹ್ವಾನಿಸುವುದು. ಈ ಕಾರ್ಯಕ್ರಮವನ್ನು ಸರಿಯಾಗಿ ಪ್ರಚಾರಗೊಳಿಸಬೇಕು.
- ಎರಡು ಗಂಟೆಗಳ ಕಾರ್ಯಕ್ರಮವನ್ನು ನಡೆಸಬೇಕು. ತೀರ್ಪುಗಾರರು, ಬಹುಮಾನಗಳು ಮತ್ತು ಪ್ರಶಸ್ತಿ ಪತ್ರಗಳ ಪೂರ್ಣ ಸಿದ್ಧತೆಯೊಂದಿಗೆ ಏರ್ಪಡಿಸತಕ್ಕದ್ದು.

**ಕಾಲಾವಧಿ:** ಸಮಸಂಖ್ಯೆಯ ಸೆಮಿಸ್ಟರ್‌ನ ಯಾವುದೇ ಸಮಯ.



## ಚಟುವಟಿಕೆ : ರಾಷ್ಟ್ರೀಯ ಮತದಾರರ ದಿನಾಚರಣೆ

ರಾಷ್ಟ್ರೀಯ ಮತದಾರರ ದಿನವನ್ನು ಪ್ರತಿವರ್ಷ ಜನವರಿ 25 ರಂದು ಆಚರಿಸಲಾಗುತ್ತಿದ್ದು, ಇದು ಚುನಾವಣಾ ಪ್ರಕ್ರಿಯೆಯಲ್ಲಿ ಯುವಕರು ಪಾಲ್ಗೊಳ್ಳುವಂತೆ ಮಾಡುವಂತಹ ತನ್ನ ಉದ್ದೇಶದಲ್ಲಿ ಮಹತ್ವದ್ದಾಗಿದೆ.

ಇ.ಎಲ್.ಸಿ. ಸದಸ್ಯರಾಗಿ ಈ ದಿನವನ್ನು ಪರಿಗಣಿಸುವುದು ಪ್ರಮುಖವಾಗಿದ್ದು, ಇದರ ಪ್ರಾಮುಖ್ಯತೆಗೆ ಒತ್ತುನೀಡಬೇಕಾಗಿದೆ. ಇದರಿಂದಾಗಿ ಇ.ಎಲ್.ಸಿ. ಸದಸ್ಯರು ಎಲ್ಲಾ ವಿದ್ಯಾರ್ಥಿಗಳು ಮತ್ತು ಬೋಧಕ ಸದಸ್ಯರನ್ನು ಆಹ್ವಾನಿಸಿ ಕಾಲೇಜಿನಲ್ಲಿಯೇ ಒಂದು ವಿಶೇಷ ಸಭೆ/ಸಮಾರಂಭವನ್ನು ನಡೆಸುವುದು.

- ವಿದ್ಯಾರ್ಥಿಗಳು ಮತದಾರ ಮೌಲ್ಯವನ್ನು ಒತ್ತು ನೀಡುವಂತಹ ಭಿತ್ತಿಪತ್ರ(ಪೋಸ್ಟರ್) ಮತ್ತು ಇತರೆ ಕುಶಲಕಲೆಗಳಿಂದ ಆ ಸ್ಥಳವನ್ನು ಅಲಂಕಾರಗೊಳಿಸುವರು.
- ಜಿಲ್ಲಾ ಚುನಾವಣಾ ಅಧಿಕಾರಿ ಅಥವಾ ಅವರ ಕಛೇರಿಯಿಂದ ಪ್ರತಿನಿಧಿಗಳನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಬಹುದು.
- ಇ.ಎಲ್.ಸಿ. ಸದಸ್ಯರು ಈ ಕಾರ್ಯಕ್ರಮದಲ್ಲಿ ನಿರೂಪಕರಾಗಿ ಕಾರ್ಯನಿರ್ವಹಿಸುವರು ಅವರು ವಿದ್ಯಾರ್ಥಿಗಳ ಮೂಲಕ ರಂಗಭೂಮಿ ನಾಟಕ, ಸಮೂಹ ಹಾಡುವಿಕೆ/ತಾಳವಾದ್ಯ ಪ್ರದರ್ಶನ ಮತ್ತು ಆಶುಭಾಷಣಗಳನ್ನು ಒಳಗೊಂಡಂತಹ ಕಾರ್ಯಕ್ರಮದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸುವರು.
- ಈ ವಿಶೇಷ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಬ್ಯಾಡ್ಜೆಸ್, ಟಿ–ಷರ್ಟ್, ಇತ್ಯಾದಿಗಳನ್ನು ವಿತರಿಸುವುದನ್ನು ಸಹ ಹಮ್ಮಿಕೊಳ್ಳಬಹುದು.
- ಚುನಾವಣಾ ಸಾಕ್ಷರತೆಗಾಗಿ ಇ.ಎಲ್.ಸಿ. ಸದಸ್ಯರು ಮತ್ತು ಇತರೆ ವಿದ್ಯಾರ್ಥಿಗಳ ಕಾರ್ಯವನ್ನು ಎನ್‌ವಿಡಿ ಸಮಾರಂಭದಲ್ಲಿ ಪರಿಗಣಿಸತಕ್ಕದ್ದು.
- ಮತದಾರ ಮಹೋತ್ಸವದಿಂದ ಭಾಗವಹಿಸುವವರನ್ನು ಸಹ ಈ ಕಾರ್ಯಕ್ರಮಕ್ಕೆ ಆಹ್ವಾನಿಸಿ ಅವರಿಗೆ ಬಹುಮಾನವನ್ನು ವಿತರಿಸಬಹುದು.

## ಚಟುವಟಿಕೆ: ಪ್ರೇರಕರ ಆಹ್ವಾನ

ಹೋರಾಟಗಾರರು ಮತ್ತು ಸಾಮಾಜಿಕ ಸಂಸ್ಥೆಗಳನ್ನು ಪ್ರೇರಕರನ್ನಾಗಿ ಆಹ್ವಾನಿಸುವಂತಹ ಕಾರ್ಯಕ್ರಮಗಳನ್ನು ಹಾಗೂ ಪಕ್ಷಾತೀತ ಈ ಕಾರ್ಯಕ್ರಮದಲ್ಲಿ ವ್ಯಕ್ತಿಗಳು ಮತ್ತು ಯುವ ಐಕಾನ್‌ಗಳೊಂದಿಗೆ ಔಪಚಾರಿಕವಲ್ಲದ ಭೇಟಿಗಳು/ಅವಧಿಗಳಾಗಿ ಆಯೋಜಿಸಿದ್ದು, ಯುವಜನತೆ ಮತ್ತು ಪ್ರಜಾಪ್ರಭುತ್ವ, ಚುನಾವಣೆಗಳು, ವಯಸ್ಕ ಮತದಾನ ರಾಜಕೀಯ ಮತ್ತು ಸಮಕಾಲೀನ ವಿಶ್ವದ ರಾಜಕೀಯ ವಿಚಾರಗಳ ಮೇಲೆ ಚರ್ಚೆಯನ್ನು ನಿರೀಕ್ಷಿಸಲಾಗಿದೆ. ಪ್ರಾಥಮಿಕವಾಗಿ ಯುವ ಜನತೆಗಳಿಂದ ಗುರುತಿಸಲ್ಪಡುವ ವಿಷಯ ಮತ್ತು ವಿಚಾರಗಳ ಮೇಲೆ ಸಮಾಲೋಚನೆ ಮತ್ತು ಸಂಭಾಷಣೆಯನ್ನು ಆರಂಭಿಸುವ ಸಾಧನಗಳಾಗಿ ಪರಿಗಣಿಸಲಾಗಿದ್ದು, ಪ್ರೇರಕರ ಆಹ್ವಾನದ ಕಾರ್ಯಕ್ರಮವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದಾಗಿದೆ– ಪ್ರಥಮವಾಗಿ, ಪೂರ್ವನಿರ್ಧಾರಿತ ವಿಷಯದ ಮೇಲೆ ಅತಿಥಿ ಭಾಷಣಕಾರರಿಂದ ಮಾತನಾಡುವುದು ಮತ್ತು ಎರಡನೆಯದಾಗಿ, ಹಾಜರಿರುವವರೊಂದಿಗೆ ಪ್ರಶ್ನೋತ್ತರ ಅವಧಿಯ ಚರ್ಚೆಯನ್ನು ನಡೆಸುವುದು. ಇಎಲ್‌ಸಿ ಸದಸ್ಯರು ಇದನ್ನು ರೆಕಾರ್ಡ್ (ದಾಖಲೀಕರಣ)ಅಥವಾ ಲೈವ್ ಕಾರ್ಯಕ್ರಮವಾಗಿ ಸಾಮಾಜಿಕ ಮಾಧ್ಯಮದ ಮೂಲಕ ಮಾಡಲು ಮುಕ್ತರಾಗಿರುವರು.

### ವಿಧಾನ

ಪ್ರಭಾವಿತರ ಆಹ್ವಾನ ಕಾರ್ಯಕ್ರಮವು ವಿಶೇಷವಾಗಿ ಎನ್‌ವಿಡಿ ಆಚರಣೆಯ ಹೊರತಾದ ಅಥವಾ ಒಳಗೊಂಡ ಅಥವಾ ಮತದಾರ ಮಹೋತ್ಸವದಲ್ಲಿಯೂ ನಿರ್ವಹಿಸಬಹುದಾಗಿದೆ.

**ಅವಧಿಗಳು:** 2 ಗಂಟೆಗಳು

## ನಿಯತ ಚಟುವಟಿಕೆ: ಕಾಲೇಜು ಮ್ಯಾಗಜೈನ್‌ಗಳಲ್ಲಿ ಕಥಾ ಲೇಖನಗಳು

ಇ.ಎಲ್.ಸಿ.ಯು ವಿದ್ಯಾರ್ಥಿಗಳಿಂದ ಅವರು ಚುನಾವಣಾ ಪ್ರಜಾಪ್ರಭುತ್ವದಲ್ಲಿ ಏಕೆ ನಂಬಿಕೆಯನ್ನು ಹೊಂದಿದ್ದಾರೆ ಎಂಬುದನ್ನು ಕಥಾ ಸಂಕಲನಗಳು, ಕಥಾ ವೃತ್ತಾಂತಗಳನ್ನು ಪ್ರಕಟಿಸಲು ಕಾಲೇಜ್ ಮ್ಯಾಗಜೈನ್‌ನ (ವಾರ್ಷಿಕ/ಮಾಸಿಕ/ತ್ರೈಮಾಸಿಕ) ಸಂಪಾದಕೀಯ ಮಂಡಳಿಯ ಸಹಯೋಗವನ್ನು ಪಡೆಯಬಹುದು.

ಪ್ರತಿ ವಲಯದಲ್ಲಿ ಕಾಲೇಜುಗಳಿಂದ ಯುವಕರು ಮತ್ತು ಭಾವಿ ಮತದಾರರಿಗಾಗಿ "ಮತದಾನದಲ್ಲಿ ನಂಬಿಕೆ" ("Belief in the Ballot") ಶ್ರೇಣಿಯನ್ನು ರೂಪಿಸಲು ಅತ್ಯುತ್ತಮ ಕಥೆಗಳನ್ನು (ಕ್ರೋಢೀಕರಿಸಿ) ಸಂಗ್ರಹಿಸಬಹುದು.

## ನಿಯತ ಚಟುವಟಿಕೆ: ಸಾಮಾಜಿಕ ಮಾಧ್ಯಮ ಆಧಾರಿತ ಚಟುವಟಿಕೆಗಳು

ಇ.ಎಲ್.ಸಿ.ಯು ತನ್ನದೇ ಆದ ಬದ್ಧತೆಯ ಸಾಮಾಜಿಕ ಮಾಧ್ಯಮ ತಾಣ ಹೊಂದುವುದನ್ನು ನಿರೀಕ್ಷಿಸುತ್ತದೆ. (ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಮ್ ಇತ್ಯಾದಿ)

ಇ.ಎಲ್.ಸಿ.ಯು ಈ ಪುಟದಲ್ಲಿನ ಸ್ಪರ್ಧೆಗಳು, ಚಟುವಟಿಕೆಗಳನ್ನು ನಿಯತವಾಗಿ ಕೈಗೊಳ್ಳುವುದು ಮತ್ತು ಮತದಾರರ ಜಾಗೃತಿಗಾಗಿ ಸಂದೇಶಗಳೊಂದಿಗೆ ವೀಕ್ಷಕರನ್ನು ತಲುಪಲು ಪ್ರಯತ್ನಿಸುವುದು. ಕೆಲವು ಸಲಹಾತ್ಮಕ ಚಟುವಟಿಕೆಗಳೆಂದರೆ–

- ಲೋಗೋ ಡಿಸೈನಿಂಗ್ (ಚಿತ್ರ ವಿನ್ಯಾಸ)
- ಟ್ಯಾಗ್‌ಲೈನ್ ಬರವಣಿಗೆ
- ಭಿತ್ತಿಪತ್ರ (ಪೋಸ್ಟರ್ಸ್) ರಚಿಸುವುದು
- ಜಿಐಎಫ್ ನಿರ್ಮಿಸುವುದು
- ಬ್ಲಾಗ್ ಬರವಣಿಗೆ
- ಮತದಾನ ನಿಕಟ ಸಂಪರ್ಕ – ಇ.ಎಲ್.ಸಿ. ಸದಸ್ಯರು ಅವರ ಕ್ಷೇತ್ರದಲ್ಲಿ ಚುನಾವಣೆಯು ನಡೆದಿದ್ದಲ್ಲಿ, ಸಮೀಪದ ಮತದಾನ ಕೇಂದ್ರದಲ್ಲಿನ ನಡವಳಿಗಳನ್ನು ವಿಡಿಯೋ ರೆಕಾರ್ಡ್ ಮಾಡಬಹುದು ಹಾಗೂ ಅದನ್ನು ತಮ್ಮ ಸಾಮಾಜಿಕ ಮಾಧ್ಯಮ ತಾಣದಲ್ಲಿ ಹಾಕಬಹುದು.



## 16. ಪ್ರಸ್ತಾವಿತ ಚಟುವಟಿಕೆಗಳ ಪಟ್ಟಿ

| ಕ್ರಸಂ. | ಚಟುವಟಿಕೆ | ಅಂದಾಜು ವೇಳಾಪಟ್ಟಿ |
|---|---|---|
| | **ಬೆಸಸಂಖ್ಯೆಯ ಸೆಮಿಸ್ಟರ್** | |
| 1 | ನೂತನ ಇಎಲ್‌ಸಿ ಕಾರ್ಯಕಾರಿ ಸಮಿತಿಯ ಚುನಾವಣೆ | ಜುಲೈ |
| 2 | ಬ್ಯಾಲಟ್ ಬಿಸ್ಕೊತ್ತ | |
| 3 | ಹೊಸಬರ ಚರ್ಚೆ | |
| 4 | ನಿಂದನಾ ಸಮರ | ಆಗಸ್ಟ್ |
| 5 | ಖಂಡನಾ ಪದ್ಯ | |
| 6 | ಮೂಕಾಭಿನಯ ಕಲೆ | |
| 7 | ಬ್ಯಾಲಟ್ ಬಿಸ್ಕೊತ್ತ | ಸೆಪ್ಟಂಬರ್ |
| 8 | ಪ್ರೇರಕರ ಆಹ್ವಾನ | |
| 9 | ಛಾಯಾಚಿತ್ರ ಪ್ರದರ್ಶನ | |
| 10 | ಕಲಾ ಸ್ಪರ್ಧೆ | ಅಕ್ಟೋಬರ್ |
| 11 | ಪ್ರೇರಕರ ಆಹ್ವಾನ | |
| 12 | ರಾಷ್ಟ್ರೀಯ ಮತದಾರರ ದಿನಕ್ಕೆ ಸಿದ್ಧತೆ | ನವಂಬರ್ |
| 13 | ಕಿರು ಚಿತ್ರ ನಿರ್ಮಾಣಕ್ಕಾಗಿ ಘೋಷಣೆ | |
| 14 | ಕಾಲೇಜು ಮ್ಯಾಗಜೈನ್‌ನಲ್ಲಿ ಗೋಡೆ ಮ್ಯಾಗ್‌ಜೈನ್ ಮತ್ತು ವಿಶೇಷ ಕಥೆ | ನಿಯತ ಚಟುವಟಿಕೆ |
| | **ಸಮಸಂಖ್ಯೆಯ ಸೆಮಿಸ್ಟರ್** | |
| 15 | ರಾಷ್ಟ್ರೀಯ ಮತದಾರರ ದಿನಾಚರಣೆ | ಜನವರಿ |
| 16 | ಪ್ರೇರಕರ ಆಹ್ವಾನ | |
| 17 | ಚಿತ್ರ ಪರಿವೀಕ್ಷಣೆ | ಫೆಬ್ರವರಿ |
| 18 | ಸಿಇಓರವರ ಭೇಟಿ | ಮಾರ್ಚ್ |
| 19 | ಬ್ಯಾಲಟ್ ಬಿಸ್ಕೊತ್ತ | ಏಪ್ರಿಲ್ |
| 20 | 18 ತುಂಬಿದ ವಿದ್ಯಾರ್ಥಿಗಳ ನೋಂದಣಿ ಆಂದೋಲನ | ಮೇ |
| 21 | ಕಾಲೇಜು ಮ್ಯಾಗಜೈನ್‌ನಲ್ಲಿ ಗೋಡೆ ಮ್ಯಾಗ್‌ಜೈನ್ ಮತ್ತು ವಿಶೇಷ ಕಥೆ | ನಿಯತ ಚಟುವಟಿಕೆ |

## 17 ಸಂಪನ್ಮೂಲಗಳು

1. ಮತದಾನದಲ್ಲಿ ನಂಬಿಕೆ
2. ಪ್ರಜಾಪ್ರಭುತ್ವದ ಕಾವಲುಗಾರರು
3. ಆಗಾಗ್ಗೆ ಕೇಳಲಾದ ಪ್ರಶ್ನೆಗಳು (FAQ) ಮತ್ತು ಪಾರಿಭಾಷಿಕ ಶಬ್ಧಕೋಶ
4. ರಿಟರ್ನಿಂಗ್ ಅಧಿಕಾರಿಗಳಿಗೆ ಕೈಪಿಡಿ
   http:/eci.nic.in/eci_main/Electorall Laws/HandBooks/ RO%HANDBOOK_24022014.pdf
5. www.nvsp.in / www.ceokarnataka.kar.nic.in



# ಸಂಚಾಲಕರ ಟಿಪ್ಪಣಿಗಳು

## ಸಂಚಾಲಕರ ಟಿಪ್ಪಣಿಗಳು

# ಸಂಚಾಲಕರ ಟಿಪ್ಪಣಿಗಳು

# ಸಂಚಾಲಕರ ಟಿಪ್ಪಣಿಗಳು

# ಸಂಚಾಲಕರ ಟಿಪ್ಪಣಿಗಳು

# ಸಂಚಾಲಕರ ಟಿಪ್ಪಣಿಗಳು

# ಸಂಚಾಲಕರ ಟಿಪ್ಪಣಿಗಳು